ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ

Raichur, Koppal, Yadagiri, Kalburgi, Ballary, Vijaya Nagar, Bidar

# ಕನ್ನಡ ಮಾತೃಭೂಮಿ

ಕನ್ನಡದಿನ ಪತ್ರಿಕೆ

ರಾಯಚೂರಿನಿಂದ ರಾಜ್ಯದವರೆಗೆ

ಸಂಪಾದಕರು : ಶ್ಯಾಮ್ ಸುಂದರ್.ಎಲ್
EDITOR : SHYAM SUNDER L

KANNADA MATHRUBHOOMI
KANNADA DAILY PAPER

mathrubhoomircr@gmail.com
Call : 9886635117

ಸಂಪುಟ : Volume : 03 | ಸಂಚಿಕೆ Issuse : 174 | ದಿನಾಂಕ : 24-04-2026 Date : 24-04-2026 | ಶುಕ್ರವಾರ Friday | RNI: Karkan/2023/89199 Post Reg No.: RCR/L/RNP/98/2025-2027 | ರಾಯಚೂರು Raichur | ಪುಟ : Pages : 04 | ರೂ Rs. 2

## ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಫಲಿತಾಂಶ ಹೆಚ್ಚಳ: ಮಕ್ಕಳು, ಶಿಕ್ಷಕರಿಗೆ ಅಭಿನಂದಿಸಿದ ಡಿಸಿ

**ರಾಯಚೂರು,ಏ.23**-ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಜಿಲ್ಲೆಯ ಕಳೆದ ಬಾರಿಗಿಂತ ಹೆಚ್ಚಿನ ಫಲಿತಾಂಶ ಪಡೆದಿದ್ದು ರಾಜ್ಯದಲ್ಲಿ 21 ಸ್ಥಾನ ಪಡೆದಿದೆ. 2024-25 ಸಾಲಿನಲ್ಲಿ ಶೇ. 75 ಫಲಿತಾಂಶ ಪಡೆದಿದ್ದರೆ ಪ್ರಸ್ತಕ ಸಾಲಿನಲ್ಲಿ 94.41 ರಷ್ಟು ಫಲಿತಾಂಶ ಜಿಲ್ಲೆಗೆ ಲಭ್ಯವಾಗಿದೆ. ಫಲಿತಾಂಶ ಹೆಚ್ಚಳಕ್ಕೆ ಶ್ರಮಿಸಿದ ಶಿಕ್ಷಕರು, ಜಿಲ್ಲಾ ಪಂಚಾಯ್ತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಡಿಡಿಪಿಐ ಸೇರಿದಂತೆ ಶ್ರಮಸಿದ ಎಲ್ಲರಿಗೂ ಅಭಿನಂದಿಸುವದಾಗಿ ಜಿಲ್ಲಾಧಿಕಾರಿ ನಿತೀಶ್ ಹೇಳಿದರು.

ಅವರಿಂದು ಮಾಧ್ಯಮದೊಂದಿಗೆ ಮಾತನಾಡಿ, ಈ ಬಾರಿ ಪರೀಕ್ಷೆ 27,757 ವಿದ್ಯಾರ್ಥಿಗಳುಪರೀಕ್ಷೆ ಬರೆದಿದ್ದು, 26,205 ವಿದ್ಯಾರ್ಥಿಗಳುತೇರ್ಗಡೆಹೊಂದಿದ್ದಾರೆ. ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಎರಡನೇ ಸ್ಥಾನದ ಫಲಿತಾಂಶ ಪಡೆದುಕೊಂಡಿದೆ. ಮಾನವಿ ತಾಲೂಕಿನ ಬಿವಿಆರ್ ಶಾಲೆಯ ವಿದ್ಯಾರ್ಥಿ ಸುಖದೇವ 625 ಅಂಕ ಪಡೆದಿದ್ದು ಏಳು ಜನ ಟಾಪರ್‌ನಲ್ಲಿ ಒಬ್ಬ ವಿದ್ಯಾರ್ಥಿಯಾಗಿದ್ದಾನೆ. ➘4

## ನಗರದಲ್ಲಿ ನೆರಳಿನ ವ್ಯವಸ್ಥೆ ಮಾಡಲು ಆಗ್ರಹಿಸಿ ಪ್ರಗತಿಪರ ಸಂಘಟನೆಗಳ ಪ್ರತಿಭಟನೆ

**ರಾಯಚೂರು,ಏ.23**-ಬಿಸಿಲ ಬೇಗೆ ಹೆಚ್ಚಳವಾಗುತ್ತಿದ್ದು ಮಹಾನಗರ ಪಾಲಿಕೆ ಜನರಿಗೆ ನೆರಳು, ನೀರಿನ ವ್ಯವಸ್ಥೆ ಮಾಡುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದಪ್ರತಿಭಟನೆ ನಡೆಸಲಾಯಿತು. ನಗರದ ಬಸವೇಶ್ವರದಲ್ಲಿ ಪ್ರತಿಭಟಿಸಿ ಕಾರ್ಯಕರ್ತರು ಕಳೆದ ಬಾರಿಗಿಂತ ಬಿಸಲು ಹೆಚ್ಚಳವಾಗುತ್ತಿದೆ. ಜನರ ಆರೋಗ್ಯ ರಕ್ಷಣೆಗೆ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಂಡಿಲ್ಲ. ಸಿಂಗಲ್‌ಗಳಲ್ಲಿ ಕುಡಿಯುವ ನೀರು, ನೆರಳಿನ ವ್ಯವಸ್ಥೆ ಮಾಡಿಲ್ಲ ಎಂದು ದೂರಿದರು.

ಸಮಾಜಿಕ ಕಾರ್ಯಕರ್ತ ಅಂಬಾಜಿರಾವ್ ಮಾತನಾಡಿ ಬೇಸಿಗೆ ಪ್ರಾರಂಭವಾಗುವ ಮುನ್ನವೇ ನೆರಳು, ರಸ್ತೆಗಳಲ್ಲಿ ನೀರು ಸಿಂಪಡಿಸುವದು, ಕುಡಿಯುವನೀರಿನ ಅರವಟ್ಟಿಗೆ ವ್ಯವಸ್ಥೆ ಮಹಾನಗರ ಪಾಲಿಕೆ ಮಾಡಬೇಕಿತ್ತು. ಪಾಲಿಕೆ ಆರೋಗ್ಯ ಮುಂಜಾಗ್ರತಾ ಕ್ರಮ ಕೈಗೊಂಡಿಲ್ಲ. ➘4

## ಚಾಲಕನ ನಿಯಂತ್ರಣ ತಪ್ಪಿ ಹಳ್ಳಕ್ಕೆ ಉರುಳಿದ ಸರ್ಕಾರಿ ಬಸ್

**ಲಿಂಗಸುಗೂರು,ಏ.23**- ನಾಲತವಾಡ ದಿಂದ ಆನೆಹೊಸೂರು ಮಾರ್ಗವಾಗಿ ಲಿಂಗಸುಗೂರಿಗೆ ತೆರಳುತ್ತಿರುವ ಸರ್ಕಾರಿ ಬಸ್ ಸ್ಟೇರಿಂಗ್ ರಾಡ್ ತುಂಡಾದ ಪರಿಣಾಮ ಚಾಲಕನ ನಿಯಂತ್ರಣಕ್ಕೆ ಬಾರದ ಬಸ್ ಹಳ್ಳಕ್ಕೆ ಉರುಳಿದ ಘಟನೆ ಇಂದು ಬೆಳಿಗ್ಗೆ 8:30 ರ ಸುಮಾರಿಗೆ ನಡೆದಿದೆ.

ನಾಲತವಾಡದಿಂದ ಲಿಂಗಸುಗೂರಿಗೆ ಹೋಗುವ ಬಸ್ ನಲ್ಲಿ 30 ಜನ ಪ್ರಯಾಣಿಕರು ಇದ್ದರು. ಅದೃಷ್ಟವಶಾತ್ ಯಾವುದೇ ಅಹಿತಕರ ಘಟನೆ ಸಂಭವಿಸಿಲ್ಲ 30 ಪ್ರಯಾಣಿಕರಿಗೂ ಯಾವುದೇ ಗಾಯಗಳಾಗದೇ ಪಾರಗಿ ರಾಗಿದ್ದಾರೆ.

ನಿಯಮ ಉಲ್ಲಂಘನೆ: ನಿಯಮಗಳ ಪ್ರಕಾರ ತಡೆ ರಹಿತ ಹಾಗೂ ಮುಂದೆ ಬಾಗಿಲು ಇರುವ ಬಸ್ ಗಳಿಗೆ ಮಾತ್ರ ಡ್ರೈವರ್ ಕಂ ಕಂಡಕ್ಟರ್ ನಿಯೋಜಿಸಲಾಗುತ್ತದೆ. ಆದರೆ ಅಧಿಕಾರಿಗಳು ನಿಯಮ ಉಲ್ಲಂಘಿಸಿ ಗ್ರಾಮಾಂತರ ಮಾರ್ಗದ ಬಸ್ ಗೆ ಡ್ರೈವರ್ ಕಂ ಕಂಡಕ್ಟರ್ ನಿಯೋಜನೆ ಮಾಡಲಾಗಿದೆ. ಅಲ್ಲದೇ ಅವಧಿ ಮುಗಿದ ಬಸ್ ಗಳನ್ನು ಓಡಿಸಲಾಗುತ್ತಿದೆ ಎಂದು ಪ್ರಯಾಣಿಕರು ಆರೋಪಿಸಿದರು.


### ಎಸ್‌ಎಸ್‌ಎಲ್‌ಸಿ ಫಲಿತಾಂಶ : ಶೇ.94.01ರಷ್ಟು ತೇರ್ಗಡೆ

# ದಕ್ಷಿಣ ಕನ್ನಡ ಪ್ರಥಮ ಕಲಬುರಗಿ ಕೊನೆ ಸ್ಥಾನ

### ಕಲ್ಯಾಣ ಕರ್ನಾಟಕಕ್ಕೆ ರಾಯಚೂರು ಪ್ರಥಮ ರಾಜ್ಯದಲ್ಲಿ 21ನೇ ಸ್ಥಾನ

**ಬೆಂಗಳೂರು,ಏ.23**-ಲಕ್ಷಾಂತರ ವಿದ್ಯಾ ರ್ಥಿಗಳು ಹಾಗು ಪೋಷಕರು ಗಳು ಕಾತರದಿಂದ ನಿರೀಕ್ಷಿಸುತ್ತಿರುವ 10ನೇ ತರಗತಿ ಪರೀಕ್ಷೆ - 1ರ ಫಲಿತಾಂಶ ಇಂದು ಪ್ರಕಟವಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಫಲಿತಾಂಶ ಬಿಡುಗಡೆ ಮಾಡಿದ್ದಾರೆ.

ಮಾಧ್ಯಮಗೋಷ್ಟಿಯಲ್ಲಿ ಮಾಹಿತಿ ನೀಡಿದ ಅವರು, ಈ ಬಾರಿ ಉತ್ತಮ ಫಲಿತಾಂಶ ಬಂದಿದೆ. ಮೊದಲ ಬಾರಿಗೆ ಡಿಜಿ ಲಾಕರ್‌ನಲ್ಲಿ ಅಂಕಪಟ್ಟಿಯಲ್ಲಿ ಲಭ್ಯವಾಗಲಿವೆ. ಈ ಬಾರಿ 7,24,794 ವಿದ್ಯಾರ್ಥಿಗಳು ಪಾಸ್ ಆಗಿದ್ದಾರೆ. ಈ ಪೈಕಿ ಶೇ.94.01ರಷ್ಟು ಫಲಿತಾಂಶ ಬಂದಿದೆ. ಕಳೆದ ವರ್ಷ 80.04ರಷ್ಟು ವಿದ್ಯಾರ್ಥಿಗಳು ಪಾಸ್ ಆಗಿದ್ದರು. ಈ ಬಾರಿ ಶೇ.14ರಷ್ಟು ಫಲಿತಾಂಶ ಪ್ರಮಾಣ ಹೆಚ್ಚಳವಾಗಿದೆ ಎಂದು ಸಚಿವರು ಹೇಳಿದರು. ➘4






**625ಕ್ಕೆ 625 ಅಂಕ ಪಡೆದ ವಿದ್ಯಾರ್ಥಿಗಳ ಪಟ್ಟಿ:**

- ಅಥಣಿ ತಾಲೂಕಿನ ಕಟಗೇರಿ ಸರ್ಕಾರಿ ಶಾಲೆಯ ವಿದ್ಯಾರ್ಥಿನಿ ಪ್ರಾರ್ಥನಾ ನಾಗಪ್ಪ ಪಾಟೀಲ್
- ದಾವಣಗೆರೆಯ ಚನ್ನಗಿರಿ ತಾಲೂಕಿನ ಕಬ್ಬಾಳ ಶ್ರೀವಿದ್ಯಾಲಕ್ಷ್ಮೀ ಹೈಸ್ಕೂಲ್‌ನ ಭರತ್ ಜಿ
- ಚಿಕ್ಕಮಗಳೂರು ತಾಲೂಕಿನ ಸೇಂಟ್ ಮೇರಿ ಹೈಸ್ಕೂಲ್‌ನ ಬೃಂದಾ ಎಂ ತಾಪ್ಸೆ
- ಬೆಂಗಳೂರು ಉತ್ತರದ ಪೂರ್ಣಪ್ರಜ್ಞಾ ಶಾಲೆಯ ಧನುಷ್ ಸುರ್ದೀ
- ಉಡುಪಿಯ ಕುಂದಾಪುರ ತಾಲೂಕಿನ ಮದರ್ ತೆರೇಸಾ ಶಾಲೆಯ ಪ್ರೀಥಮ್ ಜಿ ಪೂಜಾರ್
- ವಿಜಯಪುರದ ಮುದ್ದೇಬಿಹಾಳ ತಾಲೂಕಿನ ನಗರಬೆಟ್ಟದ ಆಕ್ಸ್‌ಫರ್ಡ್ ಹೈಸ್ಕೂಲ್‌ನ ಸೌಜನ್ಯ ಬಸವರಾಜ್ ಕಂದಕೂರ್
- ರಾಯಚೂರು-ಮಾನ್ವಿಯ ಬಿವಿಆರ್ ಹೈಸ್ಕೂಲ್‌ನ ಸುಖದೇವ್

## ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ಬದ್ಧ ಪ್ರಧಾನಿಗಳಿಂದ ಅಸಂಸದೀಯ ಟೀಕೆ ಬಿಜೆಪಿ ಸರ್ಕಾರ ಗರ್ವಭಂಗ-ಕುಮಾರನಾಯಕ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.23**-ಕೇಂದ್ರ ಬಿಜೆಪಿ ಸರ್ಕಾರ ಮಹಿಳಾ ಮೀಸಲಾತಿ ಕಾಯ್ದೆಯೊಂದಿಗೆ ಇತರೆ ಕ್ಷೇತ್ರ ಪುನರ್ ವಿಗಂಡನೆಯನ್ನು ಜಾರಿಗೊಳಿಸುವ ಹುನ್ನಾರಕ್ಕೆ ಸೋಲಾಗಿದ್ದು ಅಹಂಕಾರ ಗರ್ವಭಂಗವಾಗಿದೆ ಎಂದು ಸಂಸದ ಜಿ.ಕುಮಾರ ನಾಯಕ ಹೇಳಿದರು.

ಅವರಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿ ಕಾಂಗ್ರೆಸ್ ಪಕ್ಷ ಮಹಿಳೆಯರಿಗೆ ಶೇ.33 ಮೀಸಲು ನೀಡಲು ಕಟಿಬದ್ಧವಾಗಿದೆ. 2023 ರಲ್ಲಿ ಅಧಿನಿಯಮ ರೂಪಿತವಾಗಿದ್ದಾಗ ಕಾಂಗ್ರೆಸ್ ಸರ್ವಸಮ್ಮತ ಬೆಂಬಲ ನೀಡಿತ್ತು. ಆದರೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ನಾದಿ ವಂದನ ಮೀಸಲಾತಿ ಅಧಿನಿಯಮ ಹೆಸರಿನಲ್ಲಿ ತರಾತುರಿಯ,ರಾಜಕೀಯ ದುರುದ್ದೇಶದ ಕ್ಷೇತ್ರ ಪುನರ್ ವಿಂಡನೆ ಮಸೂದೆಯನ್ನು ಜಾರಿಗೊಳಿಸಲು ಹೊರಟಿರುವದ ಉದ್ದೇಶ ಹೊಂದಿತ್ತು. ಪ್ರತಿಪಕ್ಷಗಳೊಂದಿಗೆ ಯಾವುದೇ ಸಮಾಲೋಚನೆ, ಚರ್ಚೆ ನಡೆಸದೇ ಏಕಾಏಕಿ ಅಧಿಸೂಚನೆ ಪ್ರಕಟಿಸಿ ಕೊನೆ ಘಳಿಗೆಯಲ್ಲಿಕಾಯ್ದೆ ರೂಪಿಸಲು ಹೊರಟಿತ್ತು.

ಸರ್ಕಾರ ನಡೆ ಆತಂಕ ತರುವಂತಿತ್ತು, ವಿಸ್ತತ ಮುಕ್ತ ಚರ್ಚೆಯ ಹೃದಯವಂತಿಕೆ, ಸಮನ್ವಯತೆಯೇಇಲ್ಲದೇ ಮಸೂದೆಗೆ ಅಂಗೀಕಾರಗೊಳಿಸಲು ಮುಂದಾಗಿತ್ತು. ಕೇಂದ್ರ ಸರ್ಕಾರವೇ ಜನಗಣತಿಗೆ ಮುಂದಾಗಿದೆ. ದೇಶದ ಜನಸಂಖ್ಯೆ ಹಾಗೂ ಜಾತಿವಾರುಜನಸಂಖ್ಯೆ ಗಣತಿ ಪ್ರಕ್ರಿಯೆಜಾರಿಯಲ್ಲಿರುವಾಗ 2011 ಜನಗಣತಿಯ ಅಂಕಿ ಸಂಖ್ಯೆಯ ಮೇಲೆ ಕ್ಷೇತ್ರಗಳ ವಿಗಂಡನೆ ಹಿಂದೆ ರಾಜಕೀಯ ಲೆಕ್ಕಚಾರವಿದೆ.

ಕ್ಷೇತ್ರ ಪುನರ್ ವಿಗಂಡನೆ ಅವಶ್ಯಕವಾಗಿದ್ದರೂ ನಿಯಮ ಬದ್ಧ ವ್ಯವಸ್ಥಿತವಾಗಿ ಜಾರಿಗೊಳಿಸಬೇಕೆ ಹೊರತು ರಾಜಕೀಯ ಅಧಿಕಾರ ಕಸಿಯುವ ಕೆಲಸವಾಗಬಾರದು ಎಂದರು. ➘4

## ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಹೇಳಿಕೆ ತಪ್ಪಾಗಿ ಅರ್ಥ: ಭಯ ಹುಟ್ಟಿಸುವ ಕೆಲಸ ಮೋದಿ ಮಾಡುತ್ತಿದ್ದಾರೆ- ವಸಂತಕುಮಾರ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.23**-ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ ಹೇಳಿದರು. ಅವರಿಂದು ಮಾಧ್ಯಮಗಳೊಂದಿಗೆ ಮಾತನಾಡಿ ದೇಶದ ಪ್ರಧಾನಿ ನರೇಂದ್ರ ಮೋದಿಯವರು ಭಯೋತ್ಪಾದಕ ಎಂದು ಹೇಳಿರುವ ಭಯ ಹುಟ್ಟಿಸುವ ಕೆಲಸ ಮಾಡುತ್ತಿರುವ ಅರ್ಥದಲ್ಲಿ ಹೇಳಿದ್ದಾರೆ.

ಹೊರತು ದೇಶದ್ರೋಹ ಅರ್ಥದಲ್ಲಿ ಅಲ್ಲ. ಐಟಿ, ಇಡಿ, ಸಿಬಿಐ ತನಿಖಾ ಸಂಸ್ಥೆಗಳನ್ನು ದುರುಪಯೋಗ ಪಡೆಸಿಕೊಂಡು ವಿರೋಧ ಪಕ್ಷಗಳು, ಉದ್ಯಮಿದಾರರನ್ನು ಬೆದರಿಸಲಾಗುತ್ತಿರುವ ಅರ್ಥದಲ್ಲಿ ಹೇಳಿದ್ದಾರೆಹೊರತು ಬೇರೆ ಅರ್ಥಕಲ್ಪಿಸಲಾಗುತ್ತಿದೆ.

ಸುಧೀರ್ಘ ರಾಜಕೀಯ ಜೀವನದಲ್ಲಿ ಯಾರನ್ನು ವೈಯಕ್ತಿಕವಾಗಿ ನಿಂದಿಸಿ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿರುವ ನಿದರ್ಶನಗಳಿಲ್ಲ. ಚುನಾವಣಾ ಪ್ರಚಾರ ಭಾಷಣ ಮಾಡುವಾಗ ಭಯ ಹುಟ್ಟಿಸುವಮೂಲಕದೇಶದ ಪ್ರಧಾನಿ ಕುರಿತು ಹೇಳಿದ್ದಾರೆ. ಹತಾಶೆರಾಗಿ ಬಿಜೆಪಿಯವರು ತಪ್ಪು ಅರ್ಥದಲ್ಲಿ ಪ್ರಚಾರ ಮಾಡುತ್ತಿದ್ದಾರೆ ಎಂದರು.

### ಸಿಯಾತಲಾಬ ಬಡಾವಣೆಗೆ ಎಂಎಲ್‌ಸಿ ಎ.ವಸಂತಕುಮಾರ ಭೇಟಿ

## ಸ್ಲಂ ಮನೆಗಳ ನಿರ್ಮಾಣ ಕಾಮಗಾರಿ ಪರಿಶೀಲನೆ-ತ್ವರಿತ ಪೂರ್ಣಕ್ಕೆ ಸೂಚನೆ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.23**-ನಗರದ ಸಿಯಾತಲಾಬ್ ಬಡಾವಣೆಗೆ ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ ಅವರು ಭೇಟಿ ನೀಡಿದರು.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ನಿಗಮ ದಿಂದ ನಡೆಯುತ್ತಿರುವ ಮನೆಗಳ ನಿರ್ಮಾಣ ಕಾಮಗಾರಿ ಸ್ಥಳ ವೀಕ್ಷಣೆ ಮಾಡಿ, ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಿ ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲು ಅಧಿಕಾರಿಗಳಿಗೆ ಸೂಚಿಸಿದರು. ➘4

## ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ಖಂಡಿಸಿ ಬಿಜೆಪಿಯುವ ಮೋರ್ಚಾದಿಂದ ಕಾಂಗ್ರೆಸ್ ಕಚೇರಿ ಮುತ್ತಿಗೆ ಯತ್ನ-ಪ್ರತಿಕೃತಿ ದಹನ





■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.23**-ದೇಶದ ಪ್ರಧಾನಿಯನ್ನು ಭಯೋತ್ಪಾದಕ ಎಂದು ಹೇಳುವ ಮೂಲಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಪಮಾನ ಮಾಡಿ ಪ್ರಚೋದನಕಾರಿ ಹೇಳಿಕೆ ನೀಡಿರುವದನ್ನು ಖಂಡಿಸಿ ಬಿಜೆಪಿ ಯುವ ಮೋರ್ಚಾ ಇಂದು ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಿ ಮಲ್ಲಿಕಾರ್ಜುನ ಖರ್ಗೆಯವರ ಪ್ರತಿಕೃತಿ ದಹಿಸಿ ಪ್ರತಿಭಟನೆ ನಡೆಸಿದರು.

ನಗರದ ಗಂಜ್ ವೃತ್ತದಿಂದಪ್ರತಿಭಟನಾ ಮೆರವಣಿಗೆ ನಡೆಸಿದ ಕಾರ್ಯಕರ್ತರು ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಘೋಷಣೆಗಳನ್ನು ಹಾಕಿ ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಆಗ್ರಹಿಸಿದರು.

ಸೋಲಿನ ಹತಾಶೆಯಲ್ಲಿರುವ ಕಾಂಗ್ರೆಸ್ ಪಕ್ಷ ದೇಶದ ಪ್ರಧಾನಿಯನ್ನು ತುಚ್ಚವಾಗಿ ನಿಂದಿಸುವ ಮೂಲಕ ದೇಶದ ಜನತೆಗೆ ಅಪಮಾನಿಸಿದೆ. ಪ್ರಧಾನಿ ನರೇಂದ್ರ ಮೋದಿಯವರ ➘4

## ಒಳ ಮೀಸಲು ಜಾರಿಯಾಗದೇ ನೇಮಕಾತಿ ನಡೆಸಿದರೆ ಉಗ್ರ ಹೋರಾಟ-ನರಸಪ್ಪ ದಂಡೋರ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.24**-ರಾಜ್ಯ ಸರ್ಕಾರ ಜನಪರ ಸರ್ಕಾರವಾಗದೇ ಛಲವಾದಿಗಳ ಸರ್ಕಾರವಾಗಿದ್ದು, ಛಲವಾದಿ ಸಮುದಾಯದ ಸಚಿವರು ಸರ್ಕಾರವನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಒಳಮೀಸಲಾತಿ ಜಾರಿಯಾಗುವವರೆಗೂ ಹುದ್ದೆಗಳ ನೇಮಕಾತಿ ಮಾಡಬಾರದು. ಒಂದು ವೇಳೆ ನೇಮಕಾತಿಗೆ ಸರ್ಕಾರ ಆದೇಶ ಹೊರಡಿಸಿದರೇ ಉಗ್ರವಾದ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ ಎಂದು ಮಾದಿಗ ದಂಡೋರ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ನರಸಪ್ಪ ದಂಡೋರ ಹೇಳಿದರು.

ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಮಾರ್ಚ್ 12ರಂದು ಒಳಮಿಸಲಾತಿ ಜಾರಿಗಾಗಿ ಮತ್ತು 56432 ಹುದ್ದೆಗಳ ಭರ್ತಿ ಮಾಡಿಕೊಳ್ಳುವುದನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಬೆಂಗಳೂರಿನಲ್ಲಿ ಬೃಹತ್ ಸಮಾವೇಶವನ್ನು ಮಾಡಲಾಗಿದೆ. ಸಮಾವೇಶದಲ್ಲಿ 101 ಜಾತಿಗಳಿಗೆ ಕಾನೂನಾತ್ಮಕವಾಗಿ ಒಳಮಿಸಲಾತಿ ಜಾರಿ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸಲಾಗಿ ➘4

## 26 ರಂದು ಹುಬ್ಬಳ್ಳಿಯಲ್ಲಿ ಅಹಿಂದ್ ಸಂಘಟನೆಯಿಂದ ರಾಜ್ಯಮಟ್ಟದ ವಿಚಾರ ಸಂಕಿರಣ- ಕೆ.ಶಾಂತಪ್ಪ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.23**-ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಹುಟ್ಟು ಪಡೆದುಕೊಂಡಿದ್ದ ಅಹಿಂದ್ ಸಂಘಟನೆ 25 ವರ್ಷಗಳ ಸಾಧನೆಯನ್ನು ಮೆಲಕು ಹಾಕಲು ಏ.26 ರಂದು ಹುಬ್ಬಳ್ಳಿಯ ರಾಯಲ್ ರಿಟೀಜ್ ಹೋಟೆಲ್‌ನಲ್ಲಿ ರಾಜ್ಯ ಮಟ್ಟದ ವಿಚಾರ ಸಂಕೀರಣ ಆಯೋಜಿಸಲಾಗಿದ್ದು ಹಿಂದುಳಿದ ವರ್ಗಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಕೆ.ಶಾಂತಪ್ಪ ಮನವಿ ಮಾಡಿದರು.

ಅವರಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿ, ಸಂವಿಧಾನ ಆಶಯದಂತೆ ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸುವ ದೃಷ್ಟಿಯಿಂದ ಅಸಮಾನತೆ ಹೋಗಲಾಡಿಸುವ ಉದ್ದೇಶದಿಂದ ಅಲ್ಪಸಂಖ್ಯಾತರು, ಹಿಂದುಳಿದ ಮತ್ತು ದಲಿತರು ಸೇರಿ ಪ್ರಾರಂಭಿಸಿದ ಚಳುವಳಿಗೆ 25 ವರ್ಷ ಸಂದಿವೆ. 1998 ರಲ್ಲಿ ಕೋಲಾರದಲ್ಲಿ ಅಹಿಂದ್ ಸಂಘಟನೆ ಅಸ್ತಿತ್ವಕ್ಕೆ ಬಂದಿತ್ತು, ವೈಚಾರಿಕತೆ, ಸಂಘಟಿತ ಚಳುವಳಿ ರಾಜ್ಯದಾದ್ಯಂತ ವಿಸ್ತರಿಸಿಕೊಂಡು 1999 ರಲ್ಲಿ ➘4



## ಸಚಿವ ಸಂಪುಟ ಸಭೆಯಲ್ಲಿ ನಾಗಮೋಹನ ದಾಸ್ ವರದಿ ತಿರಸ್ಕರಿಸಲಿ-ಶಿವರಾಜ ಜಾನೇಕಲ್



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.24**-ನ್ಯಾ.ನಾಗಮೋಹನದಾಸ ಆಯೋಗದ ವರದಿಯಿಂದ ಬಲಗೈ ಸಮುದಾಯದ ಜನರಿಗೆ ಅನ್ಯಾಯವಾಗಿದ್ದು, ಏ.24ರದು ನಡೆಯಲಿರುವ ವಿಶೇಷ ಸಂಪುಟ ಸಭೆಯಲ್ಲಿ ನಾಗಮೋಹನದಾಸ್ ಆಯೋಗದ ವರದಿಯನ್ನು ತಿರಸ್ಕರಿಸಿ, 2025ರ ಸಂಪುಟ ಸಭೆಯ ನಿರ್ಣಯವನ್ನು ಮರುಪರಿಶೀಲಿಸಿ, 101 ಜಾತಿಗಳಿಗೆ ಸಂಪೂರ್ಣ ನ್ಯಾಯ ಸಿಗುವಂತೆ ನಿರ್ಧಾರ ಕೈಗೊಳ್ಳಬೇಕು ಎಂದು ರಾಜ್ಯ ಛಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷ ಶಿವರಾಜ ಜಾನೇಕಲ್ ಹೇಳಿದರು.

ಅವರಿಂದು ಮಾದ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಒಳ ಮೀಸಲಾತಿ ಜಾರಿ ಮಾಡುವಲ್ಲಿ ಸರ್ಕಾರದ ಗೊಂದಲಮಯ ನಿರ್ಣಯಗಳಿಂದ ಜಾತಿ ಜಾತಿಗಳ ಮಧ್ಯೆ ಜಗಳ ನಡೆಯುತ್ತಿದ್ದು, ಪರಿಶಿಷ್ಟ ಜಾತಿಗಳ ವಿವಿಧ ಉಪಜಾತಿಗಳಿಗೆ ಪ್ರಾತಿನಿಧ್ಯ ಕುರಿತು ನ್ಯಾ.ನಾಗಮೋಹನದಾಸ ಆಯೋಗದ ವರದಿಯಿಂದ ಬಲಗೈ ಸಮುದಾಯಕ್ಕೆ ಅನ್ಯಾಯವಾಗುತ್ತದೆ. 24ರಂದು ನಡೆಯುವ ವಿಶೇಷ ಸಂಪುಟ ಸಭೆಯಲ್ಲಿ ನಾಗಮೋಹನ ದಾಸ ಆಯೋಗದ ವರದಿಯನ್ನು ಕೈಬಿಟ್ಟು, ವಿಶೇಷ ತಂಡವನ್ನು ರಚಿಸಬೇಕು ಎಂದರು.

ಈ ಸಂದರ್ಭದಲ್ಲಿ ಯಲ್ಲಪ್ಪ ಬೊಮ್ಮನಾಳ, ಶ್ರೀನಿವಾಸ, ರಮೇಶ, ನಾಗರಾಜ, ಸಂತೋಷ, ಲಕ್ಷ್ಮಣ, ಮಲ್ಲೇಶ ಸೇರಿ ಅನೇಕರಿದ್ದರು.

## ಕೇಂದ್ರ ಸಚಿವ ಜೋಶಿಯವರ ಮನವಿಗೆ ಸ್ಪಂದಿಸಿದ ಅಶ್ವಿನಿ ವೈಷ್ಣವ್

# ಧಾರವಾಡ ಆಕಾಶವಾಣಿ ಕೇಂದ್ರ ಸ್ಥಳಾಂತರ ಸ್ಥಗಿತ

**ನವದೆಹಲಿ,ಏ.23-**ಧಾರವಾಡ ಆಕಾಶವಾಣಿ ಪ್ರಾದೇಶಿಕ ಕೇಂದ್ರದ ಸುದ್ದಿ ವಿಭಾಗವನ್ನು ಬೆಂಗಳೂರಿಗೆ ಸ್ಥಳಾಂತರಿಸಲು ಪ್ರಸಾರ ಭಾರತಿ ಸಕ್ಷಮ ಪ್ರಾಧಿಕಾರವೂ ನಿರ್ಧಾರ ಕೈಗೊಂಡಿದ್ದನ್ನು ಕುರಿತು ಉತ್ತರ ಕರ್ನಾಟಕದ ಜನರಿಂದ ವಿರೋಧ ವ್ಯಕ್ತವಾಗಿತ್ತು.

ಈ ಕುರಿತು ಕೇಂದ್ರ ಸಚಿವ ಶ್ರೀ ಪ್ರಲ್ಹಾದ ಜೋಶಿ ಅವರು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವರಾದ ಶ್ರೀ ಅಶ್ವಿನಿ ವೈಷ್ಣವ್ ಅವರನ್ನು ಸಂಪರ್ಕಿಸಿ ಅವರಿಗೆ ಧಾರವಾಡ ಪ್ರಸಾರ ಭಾರತೀಯ ಕೇಂದ್ರದ ಕಾರ್ಯವ್ಯಾಪ್ತಿ ಮತ್ತು ಅದನ್ನು ಧಾರವಾಡದಲ್ಲಿಯೇ ಮುಂದುವರಿಸುವ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಟ್ಟಿದ್ದರು.

ಸಚಿವ ಜೋಶಿಯವರ ಮನವಿಗೆ ಸ್ಪಂದಿಸಿದ ಕೇಂದ್ರ ಸಚಿವರು ಧಾರವಾಡ ಆಕಾಶವಾಣಿ ಪ್ರಾದೇಶಿಕ ಕೇಂದ್ರವನ್ನು ಧಾರವಾಡದಲ್ಲಿಯೇ ಮುಂದುವರಿಯಲು ಆದೇಶಿಸಿದ್ದು ಅವರಿಗೆ ಸಮಸ್ತ ಉತ್ತರ ಕರ್ನಾಟಕದ ಜನತೆಯ ಪರವಾಗಿ ಸಚಿವ ಶ್ರೀ ಅಶ್ವಿನಿ ವೈಷ್ಣವಿ ಅವರಿಗೆ ಧನ್ಯವಾದಗಳನ್ನು ಜೋಶಿಯವರು ಹೇಳಿದ್ದಾರೆ.

ಉತ್ತರ ಕರ್ನಾಟಕದ ಜನರ ಧ್ವನಿಯಾಗಿರುವ ಆಕಾಶವಾಣಿ ಕೇಂದ್ರದ ಪ್ರಾದೇಶಿಕ ಸುದ್ದಿ



ವಿಭಾಗವನ್ನು ಬೆಂಗಳೂರು ಆಕಾಶವಾಣಿ ಕೇಂದ್ರಕ್ಕೆ ಸ್ಥಳಾಂತರಿಸುವುದಾಗಿ ಆದೇಶ ಹೊರಡಿಸಿರುವುದು ಖಂಡನೀಯ ಈ ಕೂಡಲೇ ಈ ಆದೇಶವನ್ನು ರದ್ದುಪಡಿಸಬೇಕು. ಪ್ರಾದೇಶಿಕ ಸುದ್ದಿ ವಿಭಾಗಕ್ಕೆ 45 ವರ್ಷಗಳ ಇತಿಹಾಸವಿದೆ. ಬೆಳಗಿನ ಪ್ರದೇಶ ಸಮಾಚಾರ ಜಿಲ್ಲಾ ವಾರ್ತಾ ಪತ್ರ, ಸಮಾಚಾರ ದರ್ಶನ, ಜೊತೆಗೆ ಸಂಸತ್ತು ಮತ್ತು ವಿಧಾನಸಭೆಯ ಕಲಾಪಗಳನ್ನು ಸುದ್ದಿ ವಿಭಾಗ ಪ್ರಸಾರ ಮಾಡುವಂತಹ ಪ್ರಮುಖ ಕೆಲಸ ಮಾಡುತ್ತಿದೆ.

ಪ್ರಾದೇಶಿಕ ಸುದ್ದಿ ವಿಭಾಗದಿಂದ ಉತ್ತರ ಕರ್ನಾಟಕದ ಜನರಿಗೆ ಪ್ರಯೋಜನವಾಗಿದೆ. ಈ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರ ಮಾಡಿದರೆ ಪ್ರಾದೇಶಿಕ ಸುದ್ದಿಗಳಿಗೆ ಪ್ರಾಮುಖ್ಯತೆ ಸಿಗುವುದಿಲ್ಲ ಎಂಬ ಕೂಗು ಈ ಭಾಗದ ಆಕಾಶವಾಣಿ ಪ್ರಿಯರಲ್ಲಿದೆ. ಇದರಿಂದ ಇಲ್ಲಿನ ಜನರಿಗೆ ಅನ್ಯಾಯವಾಗಲಿದೆ.

ಸಚಿವ ಜೋಶಿಯವರ ಹಿತಾಸಕ್ತಿ :

ಈ ಹಿಂದೆಯೂ ಆಕಾಶವಾಣಿ ಸುದ್ದಿ ವಿಭಾಗ ಸ್ಥಳಾಂತರಕ್ಕೆ ಸರ್ಕಾರ ಮುಂದಾಗಿತ್ತು ಈ ವೇಳೆ ಸಚಿವ ಜೋಶಿಯವರ ಹಿತಾಸಕ್ತಿಯ ಮೇರೆಗೆ ಸ್ಥಳಾಂತರ ಕೈ ಬಿಡಲಾಗಿದ್ದನ್ನು ಸ್ಮರಿಸಬಹುದು. ಇದೀಗ ಪುನಃ ಸುದ್ದಿ ವಿಭಾಗದ ಸ್ಥಳಾಂತರ ನಿರ್ಧಾರವೂ ಒಂದು ಪ್ರಾದೇಶಿಕ ಅಸ್ಮಿತೆ ಹೊಸಕಿದಂತೆ ಸುದ್ದಿ ವಿಭಾಗಗಳ ವಿಕೇಂದ್ರೀಕರಣ ಆಗಬೇಕೇ ವಿನಃ ಕೇಂದ್ರೀಕೃತಗೊಳಿಸುವುದು ಸರಿಯಲ್ಲ. ಎಂಬುದಾಗಿ ಕೇಂದ್ರ ಸಚಿವ ಶ್ರೀ ಪ್ರಲ್ಹಾದ ಜೋಶಿಯವರು ಪ್ರತಿಪಾದಿಸಿದ್ದರು.

ದಾರವಾಡ ಆಕಾಶವಾಣಿ ಕೇಂದ್ರಕ್ಕೆ ತನ್ನದೇ ಆದ ಛಾಪು ಜನಬೆಂಬಲ ಇದ್ದು, ಇದೀಗ ಅದೇ ಇಲ್ಲಿಂದ ಸ್ಥಳಾಂತರವಾಗುತ್ತಿರುವುದು ಆಕಾಶವಾಣಿ ಕೇಂದ್ರ ಪ್ರಿಯರಲ್ಲಿ ಬೇಸರವನ್ನುಂಟುಮಾಡಿದೆ. ಯಾವುದೇ ಕಾರಣಕ್ಕೂ ಇಲ್ಲಿಂದ ನ್ಯೂಸ್ ಬುಲೆಟಿನ್ ಹೆಸರಿನಲ್ಲಿ ಸ್ಥಳಾಂತರ ಮಾಡುತ್ತಿರುವುದನ್ನು ಕೈಬಿಡಬೇಕು ಎಂದು ಸಚಿವ ಜೋಶಿ ಆವರು ಭೇಟಿ ಸಮಯದಲ್ಲಿ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ತಿಳಿಸಿ ಆದೇಶವನ್ನು ಸ್ಥಗಿತಗೊಳಿಸಲು ಮನವಿ ಮಾಡಿದ್ದರು.

## ಆಧುನಿಕ ವಿಜ್ಞಾನ ಮತ್ತು ಸನಾತನ ಜ್ಞಾನದ ಸಂಗಮ:

# ಎಕ್ಸ್‌ಪ್ಲೋರ್ ಯುರ್ಸೆಲ್ಫ್ ಪುಸ್ತಕ ಲೋಕಾರ್ಪಣೆ

**ಹುಬ್ಬಳ್ಳಿ, ಏ.23-**ಆಧುನಿಕ ವಿಜ್ಞಾನ ಮತ್ತು ಸನಾತನ ಧರ್ಮದ ತತ್ವಗಳನ್ನು ಸಮನ್ವಯಗೊಳಿಸಿ ಪರಿಚಯಿಸುವ ವಿಶಿಷ್ಟ ಕೃತಿ ಎಕ್ಸ್‌ಪ್ಲೋರ್ ಯುರ್ಸೆಲ್ಫ್ (ಆಧುನಿಕ ವಿಜ್ಞಾನ ಮತ್ತು ಸನಾತನ ಜ್ಞಾನದ ಆಧಾರದ ಮೇಲೆ) ಪುಸ್ತಕದ ಲೋಕಾರ್ಪಣೆ ಸಮಾರಂಭವು ಹುಬ್ಬಳ್ಳಿಯಲ್ಲಿ ಯಶಸ್ವಿಯಾಗಿ ನಡೆಯಿತು.

ಈ ಕಾರ್ಯಕ್ರಮವು ಶಿರಡಿ ಸಾಯಿಬಾಬಾ ದೇವಸ್ಥಾನದ ಸಭಾಗೃಹ, ಶಿರಡಿ ನಗರ, ಉಣಕಲ್, ಹುಬ್ಬಳ್ಳಿ ಇಲ್ಲಿ ಭವ್ಯವಾಗಿ ಜರಗಿತು.

ಈ ಕೃತಿಯನ್ನು ಪೂಜ್ಯ ಶ್ರೀ ಸ್ವಾಮಿ ವಿಜಯಾನಂದ ಸರಸ್ವತಿ ಮಹಾರಾಜರು, ಅಧ್ಯಕ್ಷರು, ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮ, ಧಾರವಾಡ, ಅವರು ಲೋಕಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಡಾ. ಎ. ಡಿ. ಕೊಟ್ನಾಳ, ಮಾಜಿ ಆಡಳಿತ ಮಂಡಳಿ ಸದಸ್ಯರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ; ಶ್ರೀ ವಿಶ್ವನಾಥ ತ್ರಿಮಲ್ಲೆ, ಅಧ್ಯಕ್ಷರು, ಶ್ರೀ ಶಿರಡಿ ಸಾಯಿಬಾಬಾ ಮಹಾಮಂಡಳ (ರಿ), ಹುಬ್ಬಳ್ಳಿ; ಹಾಗೂ ಮಹಾಮಂಡಲದ ಪದಾಧಿಕಾರಿಗಳಾದ ಜಗದೀಶ ಎಲಿಗಾರ, ವಿನೋದ ಹೊನ್ನಾವರ, ದತ್ತಾ ಲೋಖಂಡೆ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.




ಈ ಪುಸ್ತಕವು ಆಧುನಿಕ ವಿಜ್ಞಾನ ಮತ್ತು ಸನಾತನ ಧರ್ಮದ ನಡುವಿನ ಆಳವಾದ ಸಂಬಂಧವನ್ನು ಸರಳವಾಗಿ ವಿವರಿಸುವ ಪ್ರಯತ್ನವಾಗಿದೆ. ಇಂದಿನ ವಿಜ್ಞಾನಿಗಳು ಅತ್ಯಾಧುನಿಕ ಸಾಧನಗಳ ಮೂಲಕ ಕಂಡುಹಿಡಿಯುತ್ತಿರುವ ಅನೇಕ ಸತ್ಯಗಳನ್ನು, ನಮ್ಮ ಋಷಿ-ಮುನಿಗಳು ಸಾವಿರಾರು ವರ್ಷಗಳ ಹಿಂದೆಯೇ ಆತ್ಮಸಾಧನೆಯ ಮೂಲಕ ಅರಿತುಕೊಂಡಿದ್ದರು ಎಂಬುದನ್ನು ಈ ಕೃತಿ ವಿವರಿಸುತ್ತದೆ.ಅಹಂ ಬ್ರಹ್ಮಾಸ್ಮಿ, ತತ್ ತ್ವಮ್ ಅಸಿ, ಯಥಾ ಪಿಂಡೆ ತಥಾ ಬ್ರಹ್ಮಾಂಡೆ ಎಂಬ ಮಹಾವಾಕ್ಯಗಳ ಅರ್ಥವನ್ನು ಆಧುನಿಕ ದೃಷ್ಟಿಕೋನದಲ್ಲಿ ಪರಿಚಯಿಸುವ

ಮೂಲಕ, ಮಾನವನೊಳಗಿನ ಅನಂತ ಶಕ್ತಿಯನ್ನು ಅರಿಯುವ ದಾರಿಯನ್ನು ಈ ಪುಸ್ತಕ ತೋರಿಸುತ್ತದೆ. ಈ ಕೃತಿ ಓದುಗರನ್ನು ಹೊಸ ರೀತಿಯಲ್ಲಿ ಚಿಂತಿಸಲು ಪ್ರೇರೇಪಿಸುವುದರ ಜೊತೆಗೆ, ಸ್ವ-ಅನ್ವೇಷಣೆಯ ಪ್ರಯಾಣಕ್ಕೆ ಪ್ರೇರಣೆ ನೀಡುತ್ತದೆ.

## ವಚನಾನಂದ ಸ್ವಾಮೀಜಿ ಉಚ್ಚಾಟನೆ ಖಂಡಿಸಿ ಟ್ರಸ್ಟಿಗಳ ವಿರುದ್ಧ ಆಕ್ರೋಶ

# ಕೊಟ್ಟೂರು-ಕೂಡ್ಲಿಗಿ ತಾಲೂಕು ಪಂಚಮಸಾಲಿ ಸಮಾಜದಿಂದ

**ಕೊಟ್ಟೂರು,ಏ.23-**ಹರಿಹರ ಪೀಠದ ಶ್ರೀ ವಚನಾನಂದ ಸ್ವಾಮೀಜಿ ಉಚ್ಚಾಟನೆ ವಿರೋಧಿಸಿ ಟ್ರಸ್ಟ್ ನ ಪದಾಧಿಕಾರಿಗಳ ನಡೆಯನ್ನ ಕೊಟ್ಟೂರು-ಕೂಡ್ಲಿಗಿ ಉಭಯ ತಾಲೂಕಿನ ಪಂಚಮಸಾಲಿ ಸಮಾಜದ ಪರ ನಂದಿಹಳ್ಳಿ ಹಾಲಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಪಂಚಮಸಾಲಿ ಬ್ಯಾಂಕ್ ನಲ್ಲಿ ಬುಧವಾರ ಕೊಟ್ಟೂರು-ಕೂಡ್ಲಿಗಿ ತಾಲೂಕಿನ ಪಂಚಮಸಾಲಿ ಸಮಾಜದ ಪ್ರಮುಖರೊಟ್ಟಿಗೆ ನಡೆದ ಸಭೆಯಲ್ಲಿ ಮಾತನಾಡಿದರು.

ಹರಿಹರ ಪೀಠದ ಟ್ರಸ್ಟ್ ನ ಪದಾಧಿಕಾರಿಗಳಾದ ಉಮಾಪತಿ ಮತ್ತು ಬಾವಿ ಬೆಟ್ಟಪ್ಪ ಸಮಾಜದ ಕೋಟಿ ಕೋಟಿ ಹಣ ನುಂಗಿದ್ದಾರೆ ಎಂದು ಆರೋಪಿಸಿ,ಇವರೆಲ್ಲ ಸಮಾಜವನ್ನು ಇಂದು ಬೀದಿಗೆ ತಂದು ನಿಲ್ಲಿಸಿರುವುದು ನಾಚಿಕೆಗೇಡಿನ ಸಂಗತಿ ಸಮಾಜದವರು ಇವರನ್ನು ಹೇಗೆ ಸಹಿಸಿಕೊಳ್ಳಬೇಕೆಂದು ಕಿಡಿಕಾರಿದರು.

ಕೂಡ್ಲಿಗಿ ತಾಲೂಕು ಪಂಚಮಸಾಲಿ ಅಧ್ಯಕ್ಷ ರೇವಣ್ಣ ಮಾತನಾಡಿ ಪಂಚಮಸಾಲಿ ಸ್ವಾಮಿಗಳನ್ನ ಏಕಪಕ್ಷೀಯವಾಗಿ ಉಚ್ಚಾಟಿಸಿ, ಟ್ರಸ್ಟಿಗಳು ಮಠವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಇವರ ನಿರ್ಧಾರವನ್ನ ಸಮಾಜ ಖಂಡಿಸುತ್ತೆ ಎಂದರು.

ಪಂಚಮಸಾಲಿ ಸಮಾಜದ ಪ್ರಮುಖರು ಗುಳುಗಿ ವೀರೇಂದ್ರ, ಮಾತನಾಡಿ ಟ್ರಸ್ಟಿಗಳು, ಟ್ರಸ್ಟ್ ನ ಬೈಲವನ್ನು ತಮಗೆ ಬೇಕಾದ ರೀತಿಯಲ್ಲಿ ತಿರುಚಿಕೊಂಡು ತಮ್ಮ ಸ್ವಂತ ಅಸ್ತಿಯಂತೆ




ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಗುಂಡುಮುಣುಗು ತಿಪ್ಪೇಸ್ವಾಮಿ ಹರಿಹರದ ಪಂಚಮಸಾಲಿ ಪೀಠದ ಟ್ರಸ್ಟಿಗಳು ನಾಲ್ಕು ಗೋಡೆಗಳ ಮದ್ಯ ಸಮಾಜದೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳದೆ ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡಿದ್ದಾರೆ ಇದಕ್ಕೆ

ಕಾನೂನು ಸಲಹೆ ಪಡೆದು ಹೋರಾಟ ಮಾಡಬೇಕು, ಇಂದಿನ ಸಭೆ ಇಲ್ಲಿಗೆ ಸೀಮಿತವಾಗದೆ ಮುಂದಿನ ಹೋರಾಟದ ರುಪುರೇಷಗಳನ್ನು ನಿರ್ಧರಿಸಬೇಕು ಎಂದು ಸಭೆಗೆ ಸೂಚಿಸಿದರು.

ಟ್ರಸ್ಟಿನ ವಿರುದ್ದ ಪಂಚಮಸಾಲಿ ಪೀಠ ಉಳಿಸಿ ಹೋರಾಟ ಸಮಿತಿಗಳನ್ನು ಜಿಲ್ಲೆಯಲ್ಲಿ ರಚಿಸಿ ಹೋರಾಟ ಮಾಡಲು ನಿರ್ಧರಿಸಲಾಯಿತು ಹಾಗೆ ಜಯಮೃತ್ಯುಂಜಯ ಸ್ವಾಮೀಜಿ,ವಚನಾನಂದ ಸ್ವಾಮೀಜಿ ಸಿದ್ದಲಿಂಗ ಸ್ವಾಮೀಜಿ ಇವರನ್ನ ಸೇರಿಸಿ ಸಮಾವೇಶ ಮಾಡುವ ಬಗ್ಗೆ ತೀರ್ಮಾನಿಸಲಾಯಿತು.

ಕೊಟ್ಟೂರು ತಾಲೂಕು ಪಂಚಮ ಸಾಲಿ ಸಮಾಜದ ಅಧ್ಯಕ್ಷ ಚಾಪಿ ಚಂದ್ರಪ್ಪ,ಪ್ರಮುಖರಾದ ಮೊರಬದ ಶಿವಣ್ಣ, ಅಂಗಡಿ ಪಂಪಾಪತಿ,ಭರಮನಗೌಡ,ರಾಂಪುರ ವಿವೇಕಾನಂದ,ಎಸ್.ಗುರುಮೂರ್ತಿ, ,ಎನ್. ಬಸವರಾಜ್ (ಗೋಪಿ),ರಜನೀಕಾಂತ್,ಈಶ್ವರಪ್ಪ ತುರಕಾಣಿ ಮಾತನಾಡಿದರು.

ಸಭೆಯಲ್ಲಿ ದೇವರಮನಿ ಕೊಟ್ರೇಶ್ , ಅಂಬಲಿ ಕೊಟ್ರಪ್ಪ, ನಂಜನ ಗೌಡ, ನೌಕರರ ಸಂಘದ ತಾಲೂಕು ಅಧ್ಯಕ್ಷ ಮರುಳ ಸಿದ್ದಪ್ಪ. ಶಿವಣ್ಣ ಚಿನ್ನಪ್ಪ ಶಿವಪ್ರಕಾಶ್. ಚಪರದಹಳ್ಳಿ ಬಸವರಾಜ್ ಸೇರಿದಂತೆ ನೂರಕ್ಕು ಹೆಚ್ಚು ಜನ ಹಾಜರಿದ್ದರು.

- **ಟ್ರಸ್ಟಿನ ವಿರುದ್ದ ಪಂಚಮಸಾಲಿ ಪೀಠ ಉಳಿಸಿ ಹೋರಾಟ ಸಮಿತಿ ಜಿಲ್ಲೆಯಾದ್ಯಂತ ರಚನೆಗೆ ತೀರ್ಮಾನ.**
- **ಜಯಮೃತ್ಯುಂಜಯ ಸ್ವಾಮೀಜಿ,ವಚನಾನಂದ ಸ್ವಾಮೀಜಿ ಸಿದ್ದಲಿಂಗ ಸ್ವಾಮೀಜಿ ಸೇರಿಸಿ ಸಮಾವೇಶ ಮಾಡುವುದಾಗಿ ಸಭೆಯಲ್ಲಿ ನಿರ್ಧಾರ.**

## ಕಿತ್ತಲಿ ಗ್ರಾಮದಲ್ಲಿ ಪಟ್ಟಾಧಿಕಾರ ಮಹೋತ್ಸವ

# ಸಂಗೀತಭಕ್ತಿ ಗೀತೆಗಳ ರಂಗು



**ಹುಬ್ಬಳ್ಳಿ,ಏ.23-**ಶ್ರೀ ಕಾಲಕಾಲೇಶ್ವರ ಮೆಲೋಡಿ ಹಾಗೂ ಆರ್ಕೆಸ್ಟ್ರಾ ತಂಡದ ವತಿಯಿಂದ ಬಾಗಲಕೋಟೆ ಜಿಲ್ಲೆಯ ಬದಾಮಿ ತಾಲೂಕಿನ ಶ್ರೀ ಕ್ಷೇತ್ರ ಕಿತ್ತಲಿ ಗ್ರಾಮದಲ್ಲಿ ನಡೆದ ಶ್ರೀ ಸಿದ್ದರಾಮೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಮಂಜುನಾಥ ದೇವರ ನಿರಂಜನ ಚರ ಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ಸಂಗೀತ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು.

ಮಹೋತ್ಸವದ ಅಂಗವಾಗಿ ನಡೆದ ಪೀಠಾರೋಹಣ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಭಕ್ತಿಗೀತೆ, ಜಾನಪದ ಗೀತೆ ಹಾಗೂ ರಸಮಂಜರಿ ಕಾರ್ಯಕ್ರಮಗಳು ಪ್ರೇಕ್ಷಕರ ಮನಗೆದ್ದವು. ಶ್ರೀ ಕಾಲಕಾಲೇಶ್ವರ ಕಲಾ ಮತ್ತು ಸಾಂಸ್ಕೃತಿಕ ಸಂಸ್ಥೆ ಹಾಗೂ ಹೊಸ ಗಬ್ಬೂರ, ಹುಬ್ಬಳ್ಳಿ ತಂಡದ ಕಲಾವಿದರು ಸಂಗೀತಮೇಳೋಡಿ ಆರ್ಕೆಸ್ಟ್ರಾ ಮೂಲಕ ಭಕ್ತಿ ಮತ್ತು ಜನಪದ ಗೀತೆಗಳನ್ನು ಮನಮೋಹಕವಾಗಿ ಪ್ರಸ್ತುತಪಡಿಸಿದರು. ಕಾರ್ಯಕ್ರಮದಲ್ಲಿ ಕಿತ್ತಲಿ ಶ್ರೀ ಸಿದ್ದರಾಮೇಶ್ವರ ಸಂಸ್ಥಾನ ಮಠದ ಪೂಜ್ಯ ಮಂಜುನಾಥ ದೇವರು ಸೇರಿದಂತೆ ವಿವಿಧ ಸ್ವಾಮೀಜಿಗಳು ಹಾಗೂ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದು, ಕಲಾವಿದರನ್ನು ಗೌರವಿಸಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಕಲಾವಿದರಾದ ಕಿರಣಗೌಡ ತುಪ್ಪದಗೌಡ್ರ, ಬಸವರಾಜ ಕೆರೂರ, ಉಮೇಶ್ ಅಮರಗೋಳ, ದರ್ಶನ ಮಾಳಗಿ ಹಾಗೂ ನಿಸರ್ಗ ಧಾರವಾಡ ತಂಡದವರು ಭಕ್ತಿಗೀತೆ, ಜಾನಪದ ಹಾಗೂ ರಸಮಂಜರಿ ಸಂಗೀತ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿ ಮೆಚ್ಚುಗೆ ಪಡೆದರು.

## ತಾಲೂಕು ಆಡಳಿತದಿಂದ ಮಹರ್ಷಿ ಶ್ರೀ ಭಗೀರಥ ಜಯಂತಿ ಆಚರಣೆ



ಹುಬ್ಬಳ್ಳಿ: ತಾಲೂಕು ಆಡಳಿತ ಸೌಧದ ತಹಶೀಲ್ದಾರ ಕಾರ್ಯಾಲಯದಲ್ಲಿ ಹುಬ್ಬಳ್ಳಿ ತಾಲೂಕು ಆಡಳಿತದ ವತಿಯಿಂದ ಮಹರ್ಷಿ ಶ್ರೀ ಭಗೀರಥ ಜಯಂತೋತ್ಸವವನ್ನು ಮಹರ್ಷಿ ಶ್ರೀ ಭಗೀರಥ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ವಿವಿಧ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು, ಸಾರ್ವಜನಿಕರು ಇತರರು ಭಾಗವಹಿಸಿದ್ದ

## ರಸಗೊಬ್ಬರ ಬೆಲೆ ಏರಿಕೆಯಿಂದ ಸಗಣೆ ಗೊಬ್ಬರಕ್ಕೆ ಮರೆಹೋದ ಅನ್ನದಾತ





ಕುಂದಗೋಳ ರಸಗೊಬ್ಬರ ಬೆಲೆ ಏರಿಕೆ ಹಾಗೂ ಒಬ್ಬರ ಸರಿಯಾಗಿ ಸಮಯಕ್ಕೆ ಸಿಗದೇ ಇರುವುದರಿಂದ ರೈತರು ಮತ್ತೆ ಜಾನುವಾರುಗಳ ಸಗಣೆ ಗೊಬ್ಬರ ಮರೆಹೋಗಿದ್ದಾರೆ ಕಾಲ,ಕಾಲಕ್ಕೆ ಸರಿಯಾಗಿ ಮಳೆಯಾಗದ ಕಾರಣದಿಂದ ಭೂಮಿಯು ರಸಗೊಬ್ಬರಕ್ಕೆ ಹಾಳಾಗುತ್ತಿದ್ದು ಅದು ಸರಿಯಾಗಿ ಮಳೆಯಾಗದಿದ್ದರೆ ಭೂಮಿ ಬಿರುಸಾಗುತ್ತದೆ ಕಾರಣ ರೈತಪಿ ವರ್ಗವು ಮತ್ತೆ ಸಗಣಿ ಸಾವಯವ ಗೊಬ್ಬರ ಮರೆಹೋಗುತ್ತಿದ್ದಾರೆ

ನಮ್ಮ ಹಿಂದಿನ ಹಿರಿಯರು ಸಗಣೆ ಒಬ್ಬರ ತಿಪ್ಪೀಯ ಗೊಬ್ಬರ ಬಳಕೆ ಮಾಡುತ್ತಿದ್ದರು ಅವಾಗ ಚೆನ್ನಾಗಿ ಬೆಳೆ ಬೆಳೆಯುತ್ತಿದ್ದೇವೆ ಈಗ ಅದನ್ನು ನಾವು ಮರೆತು ನಾವು ಸರ್ಕಾರಿ ಗೊಬ್ಬರ ಅವಲಂಬಿತರಾಗಿದ್ದೇವೆ ಆದ ಕಾರಣ ನಮ್ಮ ಭೂಮಿ ಬಿರಸಾಗಿ ಹೋಗುತ್ತಿದೆ ಇದರಿಂದ ರೋಗ ರುಜಿನೆಗಳು ಬೆಳೆಗೆ ಬರುತ್ತಿದೆ ಇದರಿಂದ ಕೆಮಿಕಲ್ ಔಷದಿಯು ಸಿಪಣಿ ಮಾಡುತ್ತೇವೆ ಇದರಿಂದ ಆರೋಗ್ಯಕ್ಕೂ ಹಾನಿಕರ ಆಗುತ್ತಿದೆ ಇದರಿಂದ ನಾವು ಇದೀಗ ಮೇಕೆ ಕುರಿ ಜಮೀನಿನಲ್ಲಿ ರಾತ್ರಿ ಹೊತ್ತು ನಿಲ್ಲಿಸುವುದು ಮತ್ತು ಸಗಣೆಗೊಬ್ಬರ ಬಳಕೆ ಮಾಡುತ್ತಿದ್ದೇವೆ ಎನ್ನುತ್ತಾರೆ ಯವ ರೈತ ಬಸವರಾಜ ಯೋಗಪ್ಪನವರ ಗುಡೇನಕಟ್ಟಿ .

ಹೌದು ಈಗಾಗಲೇ ಮಳೆ ಅಲ್ಲಲ್ಲಿ ಆಗುತ್ತಿದ್ದು ರೈತರು ತಮ್ಮ ಜಮೀನುಗಳನ್ನು ಹದವಾಗಿ ಉಳುಮೆ ಮಾಡಿ ಬಿತ್ತನೆಗೆ ಸಿದ್ದ ಪಡಿಸುತ್ತಿದ್ದಾರೆ ರಸಗೊಬ್ಬರ ಅಬಾವು ಕಂಡು ಬರುತ್ತಿದ್ದು ರೈತರು ಆತಂಕದಲ್ಲಿ ಇದ್ದಾರೆ ಇತ್ತ ಕಡೆ ರಸಗೊಬ್ಬರ ಹಾಕದಿದ್ದರೆ ಬೆಳೆಯು ಸರಿಯಾಗಿ ಬೆಳೆ ಬರುತ್ತಿಲ್ಲ ಅದು ಈಗ ಭೂಮಿಗೆ ಹೊಂದಿಕೊಂಡಿದೆ, ಸರಕಾರಿ ರಸ ಗೊಬ್ಬರ, ಶೀಘ್ರ, ಸರಕಾರವು, ಅನ್ನದಾತನಿಗೆ ರಸಗೊಬ್ಬರವನ್ನು ಪೂರೈಕೆ ಮಾಡಲು ಕ್ರಮ ಕೈಗೊಳ್ಳಬೇಕು ಎನ್ನುತ್ತಾರೆ ಗ್ರಾಮದ ರೈತರು.



ಧಾರವಾಡ: ಧಾರವಾಡ ಜಿಲ್ಲೆ ನವಲಗುಂದ ತಾಲೂಕು , ತಿರ್ಲಾಪುರ ಗ್ರಾಮದಲ್ಲಿ ಅಪ್ರಾಪ್ತ ಬಾಲಕನಿಂದ ಸರಾಯಿ ಮಾರಾಟ ಮಾಡಿಸುತ್ತಿದ್ದ ಮಾಹಿತಿ ತಿಳಿದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬಂದ್ದಿಯವರಿಂದ ತಿಳಿದು ಬಂದ ತಕ್ಷಣ ಜಿಲ್ಲಾ ಅಕ್ಕ ಪಡೆ ಸಿಬಂದ್ದಿಯವರ ಜೊತೆ ಬಾಲಕನ ಮನೆಗೆ ಬೇಟಿ ನೀಡಿ ವಿಚಾರಿಸಿದಾಗ ಮನೆಯಲ್ಲಿ ಮಧ್ಯ ಮಾರಾಟ ಮಾಡುತ್ತಿದ್ದದು ಕಂಡು ಬಂದಿದ್ದು ಬಾಲಕನ ತಂದೆಯವರಿಗೆ ನೋಟಿಸ್ ನೀಡಿ ಬಾಲಕನನ್ನು ರಕ್ಷಣೆ ಮಾಡಿ ಮಕ್ಕಳ ಕಲ್ಯಾಣ ಸಮಿತಿ ಮೌಖಿಕ ಆದೇಶದ ಮೇರೆಗೆ ಬಾಲಕನನ್ನು ಬಾಲಕರ ಸರ್ಕಾರಿ ಬಾಲ ಮಂದಿರ್ ಉಣಕಲ್ ಸಂಸ್ಥೆಗೆ ಒಪ್ಪಿಸಲಾಗಿದೆ.

# ರಾಜ್ಯ ರಾಜಕಾರಣದಲ್ಲಿ ಬದಲಾವಣೆಯ ಗಾಳಿ-ಈಶ್ವರಪ್ಪ

**ಬಳ್ಳಾರಿ, ಏ.23-**ಮುಖ್ಯ ಮಂತ್ರಿ ಸಿದ್ದರಾಮಯ್ಯ ಬೆಂಬಲಿಗರು ಒಂದು ಕಡೆ, ಡಿಸಿಎಂ ಒಂದು ಕಡೆ ಈ ಇಬ್ಬರು ಸಿಎಂ ಮತ್ತು ಡಿಸಿಎಂ ಗುಂಪು ಮಾಡಿಕೊಂಡು ಸರಣಿ ಸಭೆಗಳನ್ನು ನಡೆಸುತ್ತಿದ್ದಾರೆ ಇತ್ತ ಉಪಮುಖ್ಯಮಂತ್ರಿ ಡಿಕೆಶಿ ಮುಖ್ಯಮಂತ್ರಿ ಪದವಿಗಾಗಿ ಶತ ಪ್ರಯತ್ನ ಮಾಡುತ್ತಾ ಕೇಂದ್ರದ ನಾಯಕರ ಮೇಲೆ ಒತ್ತಡ ಹಾಕುತ್ತಿದ್ದಾರೆ ಇದೆಲ್ಲವನ್ನು ಗಮನಿಸುತ್ತಿದ್ದಾಗ ಬರುವ ಮೂರ್ನಾಲ್ಕು ತಿಂಗಳಲ್ಲಿ ರಾಜ್ಯ ರಾಜಕಾರಣದಲ್ಲಿ ಬಹಳಷ್ಟು ಬದಲಾವಣೆ ಆಗಲಿದೆ ಎಂದು ಮಾಜಿ ಸಚಿವ ಕೆ.ಎಸ್.



ಈಶ್ವರಪ್ಪ ಹೇಳಿದರು.

ಖಾಸಗಿ ಕಾರ್ಯಕ್ರಮದ ನಿಮಿತ್ತ ಬಳ್ಳಾರಿಗೆ ಆಗಮಿಸಿದ್ದ ಅವರು ಇಂದು ನಗರದ ಸರ್ಕಾರಿ ಅತಿಥಿಗೃಹದಲ್ಲಿ ಸುದ್ದಿಗಾರರನ್ನು ಉದ್ದೇಶಿಸಿ ಮಾತನಾಡಿ ದಾವಣಗೆರೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ನ ಅನೇಕ ಮುಸ್ಲಿಂ ನಾಯಕರು ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದಾರೆಂದು ಪಕ್ಷದಿಂದ ಹೊರ ಹಾಕಿದ್ದಾರೆ.

ಅದಕ್ಕೆ ಮುಸ್ಲಿ ಗುರುಗಳು ಅದನ್ನು ವಿರೋಧಿಸಿ ಎಚ್ಚರಿಕೆ ನೀಡಿದ್ದಾರೆ. ಇದನ್ನು ಪಕ್ಷದ ಮುಖಂಡರಾರು ಖಂಡಿಸಿಲ್ಲ.

ಮುಸ್ಲೀಂರು ಯುಪಿ ಸೇರಿದಂತೆ ಹಲವು ರಾಜ್ಯಗಳಲ್ಲಿ ಬೇರೆ ಪಕ್ಷ ಬೆಂಬಲಿಸಿದ್ದಾರೆ.

ಈಗ ನಡೆದಿರುವ ರಾಜ್ಯಗಳ ಚುನಾವಣೆ ಫಲಿತಾಂಶದಿಂದ ಕಾಂಗ್ರೆಸ್ ಅವಸಾನದ ದಿಕ್ಕಿನಲ್ಲಿ ಸಾಗಲಿದೆಂದರು.

ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಗಳು ಹಾಸ್ಯಾಸ್ಪದವಾಗಿವೆ. ಅವರು ದೇಶದ ಕ್ಷಮೆ ಕೇಳಬೇಕು

ಎಂದ ಅವರು, ಮಹಿಳಾ ಮೀಸಲಾತಿ ಜಾರಿಗೆ ಕಾಂಗ್ರೆಸ್ ವಿರೋಧ ಮಾಡಿದ್ದು ಮಹಿಳೆಯರಿಗೆ ಮಾಡಿದ ಅಪಮಾನ ಎಂದರು.

# ಮೈಸೂರು : ಈಜಲು ಹೋದ ಅರಣ್ಯ ರಕ್ಷಕ ನೀರಿನಲ್ಲಿ ಮುಳುಗಿ ಸಾವು

**ಮೈಸೂರು,ಏ.23**–ಅರಣ್ಯ ಇಲಾಖೆಯ ಕ್ಯಾಂಪ್ ಮುಂಭಾಗವೇ ಹರಿಯುತ್ತಿದ್ದ ಕಬಿನಿ ಹಿನ್ನೀರಿನಲ್ಲಿ ಈಜಲು ಹೋಗಿದ್ದ ಅರಣ್ಯ ರಕ್ಷಕ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಬುಧವಾರ ನಡೆದಿದೆ.

ಹೆಚ್. ಡಿ. ಕೋಟೆ ತಾಲೂಕಿನ ಅಂಕನಾಥಪುರ ಗ್ರಾಮದ ಸುಪ್ರೀತ್ (36) ಮೃತರು. ಸುಪ್ರೀತ್ ಎಂದಿನಂತೆ ಕರ್ತವ್ಯಕ್ಕೆ ಹಾಜರಾಗಿ ರಾತ್ರಿ ಪಾಳಿಯ ಕರ್ತವ್ಯ ಮುಗಿಸಿ, ಬುಧವಾರ ಬೆಳಗ್ಗೆ ಸುಮಾರು 8 ಗಂಟೆಯ ವೇಳೆಗೆ ಉದ್ಬೂರು ಗೇಟ್ ಬಳಿಯ ಕಳ್ಳಬೇಟೆ ತಡೆ ಶಿಬಿರದ ಸಮೀಪ ತಮ್ಮ ಇಬ್ಬರು ಸಹೋದ್ಯೋಗಿಗಳಾದ ಅಯ್ಯಪ್ಪ ಹಾಗೂ ಅಮನ್ ಎಂಬುವರೊಂದಿಗೆ ಈಜಲು ಹೋಗಿದ್ದರು.

ಈಜಾಡುತ್ತಿದ್ದ ವೇಳೆ ಆಯಾಸಗೊಂಡಿದ್ದ ಸುಪ್ರೀತ್ ತಮ್ಮ ಇಬ್ಬರು ಸಹೋದ್ಯೋಗಿಗಳಿಗೆ ತಾವು ದಡಕ್ಕೆ ಹೋಗುವುದಾಗಿ ಹೇಳಿ ನೀರಿನಿಂದ ಹೊರಬರಲು ಪ್ರಯತ್ನಿಸಿದ್ದಾರೆ. ಈ ವೇಳೆ ತೀರಾ ಆಯಾಸಗೊಂಡು ನೀರಿನಲ್ಲಿ ಮುಳುಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸಹೋದ್ಯೋಗಿಗಳ ಚೀರಾಟದಿಂದ ವಿಷಯ ತಿಳಿದು ಸ್ಥಳೀಯರು ಕೂಡಲೇ ಸ್ಥಳಕ್ಕೆ ಆಗಮಿಸಿ, ಸುಪ್ರೀತ್‌ಗಾಗಿ ಹುಡುಕಾಟ ನಡೆಸಿದರು. ಎಲ್ಲಿಯೂ ಪತ್ತೆಯಾಗದ ಕಾರಣ ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದರು.

ಕೂಡಲೇ ಘಟನಾ ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕದಳದ ಸಹಾಯಕ ಠಾಣಾಧಿಕಾರಿ ಎಂ. ಜಿ. ಸೋಮಣ್ಣ, ಸಿಬ್ಬಂದಿ ಪುಂಡಲೀಕ ಲಮಾಣಿ, ಮುನಿಸಿದ್ದ ನಾಯಕ,

ರಾಹುಲ್ ಪಾಟೀಲ್, ಹೇಮಂತ ಕುಮಾರ್ ಹಾಗೂ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು, ಪೊಲೀಸ್ ಇಲಾಖೆ ಸಿಬ್ಬಂದಿ, ಕಾರಾಪುರ, ಕಬಿನಿ ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್ ಸಿಬ್ಬಂದಿ, ಇಟ್ನ ಗ್ರಾಮದ ನುರಿತ ಈಜುಗಾರರ ಜತೆಗೆ ಕೇರಳದಿಂದ ಆಗಮಿಸಿದ್ದ ಮುಳುಗು ತಜ್ಞರು ಮೃತದೇಹಕ್ಕಾಗಿ ತೀವ್ರ ಶೋಧ ಕಾರ್ಯ ಆರಂಭಿಸಿದ್ದರು. ಇಂದು (ಗುರುವಾರ) ಬೆಳಗ್ಗೆ 6ರ ಸಮಯದಲ್ಲಿ ನೀರಿನಿಂದ ಮೃತದೇಹ ಮೇಲೆತ್ತಿದ್ದಾರೆ.

ಮೃತ ಸುಪ್ರೀತ್ ಅವರಿಗೆ ಚಿಕ್ಕ ವಯಸ್ಸಿನ ಇಬ್ಬರು ಮಕ್ಕಳಿದ್ದು, ಸ್ಥಳದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಈ ಸಂಬಂಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯುತ್ ತಗುಲಿ ಇಬ್ಬರು ಯುವಕರು (ಬೆಳಗಾವಿ): ಹಿಟಾಚಿ ವಾಹನದಿಂದ ಮಣ್ಣು ತೆಗೆಯುವ ವೇಳೆ ಮೇಲ್ಗಡೆ ಹಾದುಹೋದ ವಿದ್ಯುತ್ ತಂತಿ ತಗುಲಿ

ಇಬ್ಬರು ಯುವಕರು ಸ್ಥಳದಲ್ಲೇ ಮೃತಪಟ್ಟಿರುವ ದಾರುಣ ಘಟನೆ ಸವದತ್ತಿ ತಾಲೂಕಿನ ವಟ್ನಾಳ ಗ್ರಾಮದ ಹೊರ ವಲಯದಲ್ಲಿ ಮಂಗಳವಾರ ನಡೆದಿತ್ತು.

ಜಾರ್ಖಂಡ್ ರಾಜ್ಯದ ಹಜಾರಿಬಾಗ ಜಿಲ್ಲೆಯ ಭರಕಟ್ಟಾ ತಿಲಯಾ ಪಚರುಕಿ ಗ್ರಾಮದ ಹಿಟಾಚಿ ಆಪರೇಟರ್ ರವಿಕುಮಾರ ಸಿಂಗ್(19) ಮತ್ತು ಹೆಲ್ಪರ್ ಸುಭಾಷಕುಮಾರ ಸಿಂಗ್(19) ಮೃತರು ಎಂದು ಗುರುತಿಸಲಾಗಿತ್ತು.

# ಹುಬ್ಬಳ್ಳಿ- ಮಡಗಾಂವ್ ನಡುವೆ 2 ವೇಗದೂತ ಬಸ್‌ಗಳ ಸಂಚಾರ ಆರಂಭ

**ಹುಬ್ಬಳ್ಳಿ,ಏ.23**–ಪ್ರಸ್ತುತ ಬೇಸಿಗೆ ರಜೆ ಹಿನ್ನೆಲೆಯಲ್ಲಿ ಪ್ರಯಾಣಿಕರ ಓಡಾಟ ಹೆಚ್ಚಾಗಿರುವ ಕಾರಣ ಸಾರ್ವಜನಿಕರ ಬೇಡಿಕೆಯ ಮೇರೆಗೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಹುಬ್ಬಳ್ಳಿ - ಮಡಗಾಂವ್ ನಡುವೆ ಎರಡು ವೇಗದೂತ ಬಸ್‌ಗಳ ಸಂಚಾರವನ್ನು ಆರಂಭಿಸಿದೆ.

ವಾಣಿಜ್ಯ, ಉದ್ಯೋಗ, ವಿದ್ಯಾಭ್ಯಾಸ, ಪ್ರವಾಸ, ಮತ್ತಿತರ ಕೆಲಸ ಕಾರ್ಯಗಳಿಗಾಗಿ ಪ್ರತಿ ದಿನ ಹುಬ್ಬಳ್ಳಿ-ಧಾರವಾಡ ಅವಳಿ ನಗರ ಹಾಗೂ ಜಿಲ್ಲೆಯ ವಿವಿಧ ಸ್ಥಳಗಳಿಂದ ನೆರೆಯ ಗೋವಾ ರಾಜ್ಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಹೋಗಿ ಬರುತ್ತಾರೆ. ಪ್ರಸ್ತುತ ಶಾಲಾ ಕಾಲೇಜುಗಳಿಗೆ ಬೇಸಿಗೆ ರಜೆ ಹಿನ್ನೆಲೆಯಲ್ಲಿ ಸ್ನೇಹಿತರು ಕೌಟುಂಬಿಕ ಗುಂಪು ಪ್ರವಾಸ ಮತ್ತಿತರ ಕಾರಣಗಳಿಂದಾಗಿ ಪ್ರಯಾಣಿಕರ ದಟ್ಟಣೆ ಹೆಚ್ಚಾಗಿದೆ. ಉಭಯ ರಾಜ್ಯಗಳ ನಡುವೆ ಪ್ರಯಾಣ ಮಾಡುವ ಜನರಿಗೆ ಅನುಕೂಲವಾಗುವಂತೆ ಸಾರ್ವಜನಿಕರ ಬೇಡಿಕೆಯ ಮೇರೆಗೆ ಹುಬ್ಬಳ್ಳಿ ಹಾಗೂ ಮಡಗಾಂವ್ ನಡುವೆ 2 ವೇಗದೂತ ಬಸ್ ಗಳ ಸಂಚಾರವನ್ನು ಆರಂಭಿಸಲಾಗಿದೆ.

ಎಲ್ಲಿಂದ, ಯಾವ ಮಾರ್ಗದಲ್ಲಿ ಸಂಚಾರ: ಈ ಬಸ್ಸುಗಳು ಹುಬ್ಬಳ್ಳಿಯ ಗೋಕುಲ ರಸ್ತೆ ಕೇಂದ್ರೀಯ ಬಸ್ ನಿಲ್ದಾಣದಿಂದ ಹೊರಡುತ್ತವೆ. ಧಾರವಾಡ, ಅಳ್ನಾವರ, ರಾಮನಗರ, ಪೊಂಡಾ ಮಾರ್ಗವಾಗಿ ಸಂಚರಿಸುತ್ತವೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್. ರಾಮನಗೌಡರ ತಿಳಿಸಿದ್ದಾರೆ.

**ಬಸ್‌ಗಳ ವೇಳಾಪಟ್ಟಿ ಹೀಗಿದೆ:** ಹುಬ್ಬಳ್ಳಿ-ಮಡಗಾಂವ್ ಬಸ್ - ಗೋಕುಲ ರಸ್ತೆ ಕೇಂದ್ರೀಯ ಬಸ್ ನಿಲ್ದಾಣದಿಂದ ಪ್ರತಿದಿನ ಬೆಳಗ್ಗೆ 6-30, ಹಾಗೂ 10-30ಕ್ಕೆ ಹೊರಡುತ್ತದೆ.

ಮಡಗಾಂವ್ ಗೆ ಬೆಳಗ್ಗೆ 11-15 ಹಾಗೂ ಮಧ್ಯಾಹ್ನ 3-15ಕ್ಕೆ ತಲುಪುತ್ತವೆ. ಮಡಗಾಂವ್ - ಹುಬ್ಬಳ್ಳಿ - ಮಡಗಾಂವ್ ಬಸ್ ನಿಲ್ದಾಣದಿಂದ ಬೆಳಗ್ಗೆ 11-45 ಹಾಗೂ ಸಂಜೆ 4-15ಕ್ಕೆ ಹೊರಡುವೆ. ಹುಬ್ಬಳ್ಳಿಗೆ ಸಂಜೆ 4-45 ಹಾಗೂ ರಾತ್ರಿ 9-00ಕ್ಕೆ ಆಗಮಿಸುತ್ತವೆ. ಪ್ರಯಾಣ ದರದ ಮಾಹಿತಿ: ಅಪಘಾತ ಪರಿಹಾರ ವಿಮೆ, ಟೋಲ್ ಫೀ ಇತ್ಯಾದಿ ಸೇರಿದಂತೆ ಒಟ್ಟು ಪ್ರಯಾಣ ದರ ರೂ. 229 ನಿಗದಿಪಡಿಸಲಾಗಿದೆ. ಸಾರ್ವಜನಿಕರ ಪ್ರತಿಕ್ರಿಯೆ ಗಮನಿಸಿ ಹುಬ್ಬಳ್ಳಿಯಿಂದ ಗೋವಾ ರಾಜ್ಯದ ಇತರೆ ಪ್ರಮುಖ ಸ್ಥಳಗಳಿಗೆ ಬಸ್ಸುಗಳನ್ನು ಆರಂಭಿಸುವ ಬಗ್ಗೆ ನಿರ್ಧರಿಸಲಾಗುವುದು ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಮಾಹಿತಿ ನೀಡಿದ್ದಾರೆ.

# ಮಲ್ಲಿಕಾರ್ಜುನ ಖರ್ಗೆಯ ಮೋದಿ ಭಯೋತ್ಪಾದಕ ಹೇಳಿಕೆ ಖಂಡಿಸಿ ರಾಜ್ಯ ಬಿಜೆಪಿ ಪ್ರತಿಭಟನೆ

**ಬೆಂಗಳೂರು,ಏ.23**–ಪ್ರಧಾನಿ ನರೇಂದ್ರ ಮೋದಿ ಅವರನ್ನು ಟಿಭಯೋತ್ಪಾದಕಟಿ ಎಂದು ಟೀಕಿಸಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ರಾಜ್ಯ ಬಿಜೆಪಿಯಿಂದ ಇಂದು ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಯಿತು. ಆರ್. ಅಶೋಕ್, ವಿಜಯೇಂದ್ರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಧಿಕ್ಕಾರ ಕೂಗಲಾಯಿತು.




ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ಖರ್ಗೆಯವರು ದೇಶ ವಿರೋಧಿ ಮನಸ್ಥಿತಿ ತೋರಿಸಿದ್ದಾರೆ. ಇವರು ವಿದೇಶಿ ಏಜೆಂಟರಂತೆ ನಡೆದುಕೊಳ್ಳುತ್ತಿದ್ದಾರೆ. ಇವರಿಬ್ಬರು ಜಾರ್ಜ್ ಸೊರೋಸ್ ಏಜೆಂಟರು. ಅವರ ಮಾನಸಿಕತೆಗೆ ತಕ್ಕಂತೆ ಇವರು ಭಾರತದಲ್ಲಿ ಕುಣಿಯುತ್ತಿದ್ದಾರೆ. ಎಐಸಿಸಿ ಅಧ್ಯಕ್ಷ ಸ್ಥಾನದಿಂದ ಅವರನ್ನು ಸೋನಿಯಾ ಗಾಂಧಿ ತೆಗೆಯಲಿ. ಖರ್ಗೆಯವರು ದೇಶದ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಖರ್ಗೆಯವರ ಮಾತು ಅಕ್ಷಮ್ಯ ಅಪರಾಧ ಮತ್ತು ದೇಶಕ್ಕೆ ಮಾಡಿದ ಅವಮಾನ. ಕಾಂಗ್ರೆಸ್ ಪಕ್ಷದವರು ಕುಕ್ಕರ್ ಬ್ಲಾಸ್ಟ್ ಆರೋಪಿಯನ್ನು ಬ್ರದರ್ ಎಂದು ಕರೆದಿದ್ದಾರೆ ಎಂದು ಆಕ್ಷೇಪಿಸಿದರು. ವಿಧಾನಸೌಧದಲ್ಲಿ ಖರ್ಗೆಯವರ ಬಲಗೈ ಬಂಟ, ರಾಜ್ಯಸಭಾ ಸದಸ್ಯ ಪಾಕಿಸ್ತಾನ ಜಿಂದಾಬಾದ್ ಎಂದಿದ್ದರು. ಇದನ್ನು ಖರ್ಗೆಯವರು ಖಂಡಿಸಿರಲಿಲ್ಲ. ಮುಂಬೈಯಲ್ಲಿ ಹೋಟೆಲ್ ಮೇಲೆ ಭಯೋತ್ಪಾದಕರ ದಾಳಿ ಆದಾಗ ಕಾಂಗ್ರೆಸ್‌ನವರು ಕೈಕಟ್ಟಿ ಕೂತಿದ್ದರು ಎಂದು ಕಿಡಿಕಾರಿದರು.

ವರಿಷ್ಠರು ಈ ಮಾತು ಹೇಳಿಸಿದರೇ?: ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಖರ್ಗೆಯವರು ಈ ಮಾತನಾಡಿದರೆ ಅಥವಾ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯವರು ಖರ್ಗೆಯವರಿಂದ ಈ ಮಾತನ್ನು ಹೇಳಿಸಿದರೇ? ಬಿಜೆಪಿ, ಆರ್‌ಎಸ್‌ಎಸ್ ಅನ್ನು ಅವರು ವಿಷ ಸರ್ಪಕ್ಕೆ ಹೋಲಿಸಿ, ಕೊಲ್ಲಲು ಪ್ರಚೋದಿಸುವ ಹೇಳಿಕೆ ನೀಡಿದ್ದರು. ಪ್ರಧಾನಿಯವರು ಭಯೋತ್ಪಾದಕರು ಎಂಬ ಹೇಳಿಕೆ ನಿಮ್ಮ ಮುತ್ಸದ್ಧಿತನವೇ ಎಂದು ಪ್ರಶ್ನಿಸಿದರು. ಸಂಸದ ಗೋವಿಂದ ಕಾರಜೋಳ ಮಾತನಾಡಿ, ಪ್ರಪಂಚವೇ ಮೆಚ್ಚಿ ಹೌದೌದು ಅನ್ನುವಂತ ವ್ಯಕ್ತಿ ನರೇಂದ್ರ, ಮೋದಿ. ಅವರನ್ನು ಭಯೋತ್ಪಾದಕ ಅಂದ ವಿಚಾರವನ್ನು ಖಂಡಿಸುತ್ತೇನೆ. ಮಲ್ಲಿಕಾರ್ಜುನ ಖರ್ಗೆ ಅವರು ಅನುಭವ ಮತ್ತು ಹಿರಿತನ ಮೀರಿ ತಪ್ಪು ಮಾತನಾಡುತ್ತಿದ್ದಾರೆ. ನಮಾಜ್ ನಿಲ್ಲಿಸಿ ಹಾವು ಕೊಲ್ಲಿ ಅಂತ ಹೇಳಿದ್ದರು. ಮಲ್ಲಿಕಾರ್ಜುನ ಖರ್ಗೆ ಏನು ಮಾಡಲು ಹೊರಟಿದ್ದಾರೆ?. ಕೋಮು ಸೌಹಾರ್ದ ಕದಡುವ ಕೆಲಸ ಮಾಡಿದರೆ ದೇಶದ ಜನ ಸಹಿಸಲ್ಲ. ನಿಮ್ಮ ಮಗ ಪ್ರಿಯಾಂಕ್ ಖರ್ಗೆ ಅನನುಭವಿ, ಅವರು ಮೋದಿ ಬಗ್ಗೆ ಮಾತಾಡುತ್ತಾರೆ. ನೀವು ಈಗ ಚಾಳಿ ಶುರು ಮಾಡಿದ್ದೀರಿ. 140 ಕೋಟಿ ಜನ ನಿಮ್ಮನ್ನು ಪ್ರಶ್ನೆ ಮಾಡುತ್ತಿದ್ದಾರೆ. ಸ್ವಜನಪಕ್ಷಪಾತ ಮಾಡಬೇಡಿ. ಇದರಿಂದ ಕಾಂಗ್ರೆಸ್ ನಶಿಸಿ ಹೋಗುತ್ತದೆ ಎಂದು ವಾಗ್ದಾಳಿ ನಡೆಸಿದರು.

# ಸ್ವಾಮೀಜಿ ಅವರಾಗಿಯೇ ಗೌರವದಿಂದ ಮಠ ತೊರೆಯಲಿ ಹರಿಹರ ಪಂಚಮಸಾಲಿ ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ



**ದಾವಣಗೆರೆ,ಏ.23**–ವಚನಾನಂದ ಸ್ವಾಮೀಜಿಯನ್ನು ಉಚ್ಚಾಟಿಸಿದ್ದೇವೆ. ಆಡಳಿತಾಧಿಕಾರಿ ರಾಜಕುಮಾರ್, ದಾಸೋಹ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ಅವರನ್ನು ಅಮಾನತು ಮಾಡಿದ್ದೇವೆ. ಅವರಾಗಿಯೇ ಗೌರವದಿಂದ ಮಠ ತೊರೆಯಲಿ. ಇಲ್ಲದಿದ್ದರೆ ಟ್ರಸ್ಟ್ ಮುಂದಿನ ತೀರ್ಮಾನ ಕೈಗೊಳ್ಳಲಿದೆ ಎಂದು ಹರಿಹರದ ಪಂಚಮಸಾಲಿ ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಏಪ್ರಿಲ್ 27ರಂದು ಹರಿಹರ ಮಠದಲ್ಲೇ ಲೆಕ್ಕ ಕೊಡಲು ಮುಂದಾಗಿದ್ದೇವೆ. 2008ರಿಂದ 2026ರವರೆಗೆ ಲೆಕ್ಕ ಕೊಡ್ತೀವಿ. ಸಂಘ ಬೇರೆ, ಟ್ರಸ್ಟ್ ಬೇರೆ ಇದೆ. ನಾವು ಬ್ಯಾಲೆನ್ಸ್ ಶೀಟ್ ಕೊಡ್ತಾ ಬರ್ತಿದ್ದೇವೆ. ಆದರೆ, ದಿಕ್ಕು ತಪ್ಪಿಸುವ ಸಲುವಾಗಿ ಲೆಕ್ಕ ಕೊಡಿ ಎಂಬ ಅಭಿಯಾನ ನಡೆಸಿದ್ದಾರೆ. ಯಾವುದೇ ಟ್ರಸ್ಟ್‌ನಲ್ಲಿ ಲೆಕ್ಕ ಕೊಡುವ ಪದ್ಧತಿ ಇಲ್ಲ. ಆದರೂ ಸಹ ಪೈಸೆ ಪೈಸೆ ಲೆಕ್ಕ ಕೊಡಲು ಮುಂದಾಗಿದ್ದೇವೆ. ಲೆಕ್ಕದ ವಿಚಾರವಾಗಿ ತಪ್ಪು ಕಲ್ಪನೆ ಮೂಡಿಸುತ್ತಿದ್ದಾರೆ. ಹೀಗಾಗಿ ಪೀಠದ ಹುಟ್ಟಿನಿಂದ ಇಲ್ಲಿಯವರೆಗೆ ಲೆಕ್ಕ ಕೊಡುತ್ತೇವೆ ಎಂದು ಅವರು ಹೇಳಿದರು. ಟ್ರಸ್ಟಿ ಚಂದ್ರಶೇಖರ್ ಪೂಜಾರ್ ಅವರು ಮಾತನಾಡಿ, ಆದಷ್ಟು ಬೇಗ ಸ್ವಾಮೀಜಿ ಮಠದಿಂದ ಹೋಗಬೇಕು. ಉಚ್ಚಾಟನೆಯ ಹಿನ್ನೆಲೆಯಲ್ಲಿ ಸ್ವಾಮೀಜಿ ಹಕ್ಕು ಕಳೆದುಕೊಂಡಿದ್ದಾರೆ. ಹತ್ತು ದಿನಗಳಾದರೂ ನಿರ್ಗಮಿಸದೇ ಹಕ್ಕ್ ಕಳೆದುಕೊಂಡಿದ್ದಾರೆ. ಪದೇ ಪದೇ ಮೀಟಿಂಗ್ ಮಾಡಿ ಗೊಂದಲ ಸೃಷ್ಟಿಸುತ್ತಿದ್ದಾರೆ. ನಾಳೆ ಬಸವ ಜಯಂತಿ ಮಾಡುತ್ತೇವೆ ಎಂದಿದ್ದಾರೆ. ಪದಚ್ಯುತಿ ಆದವರು ಕಾರ್ಯಕ್ರಮ ಮಾಡಬಾರದು. ಸ್ವಾಮೀಜಿಯನ್ನು ತಿದ್ದಬೇಕು ಅಂತಾ ಹೊರಟಿದ್ದೆವು. ಆದರೆ ಲೆಕ್ಕಪತ್ರ ಚಳುವಳಿ ಹುಟ್ಟು ಹಾಕಿ ಗೊಂದಲ ಸೃಷ್ಟಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಟ್ರಸ್ಟ್‌ನ ಪ್ರಧಾನ ಧರ್ಮದರ್ಶಿ ಉಮಾಪತಿ ಅವರ ನೇತೃತ್ವದಲ್ಲಿ ಲೆಕ್ಕ ಕೊಡುವ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ, ಎಸ್ಪಿಗೆ ದೂರು ನೀಡಿದ ಟ್ರಸ್ಟಿಗಳು: ಸ್ವಾಮೀಜಿ ವಿರುದ್ಧ ಧರ್ಮದರ್ಶಿ ಬಿ.ಸಿ. ಉಮಾಪತಿ ಹಾಗೂ ಕಾರ್ಯದರ್ಶಿ ಜ್ಯೋತಿ ಪ್ರಕಾಶ ಅವರು ಜಿಲ್ಲಾಧಿಕಾರಿ ಮತ್ತು ಎಸ್ಪಿಗೆ ದೂರು ನೀಡಿದ್ದಾರೆ.

ಸ್ವಾಮೀಜಿ ಮಠದಲ್ಲೇ ಇದ್ದು, ಸುದ್ದಿಗೋಷ್ಠಿಯಲ್ಲಿ ಬಾಯಿಗೆ ಬಂದಂತೆ ಮಾತಾಡುತ್ತಿದ್ದಾರೆ. ಇದೇ 24ರಂದು ಮಠದಲ್ಲಿ ಬಸವ ಜಯಂತಿ ಆಚರಿಸಲು ಮುಂದಾಗಿದ್ದಾರೆ. ಇದು ತಪ್ಪು. ಅಂದು ಯಾವುದೇ ಅಹಿತಕರ ಘಟನೆಗಳು ನಡೆದರೆ, ಆಸ್ತಿಪಾಸ್ತಿಗೆ ಹಾನಿಯಾದರೆ ಉಸ್ತುವಾರಿ ಡಾ.ರಾಜಕುಮಾರ ಹಾಗೂ ಲೆಕ್ಕ ಕೊಡಿ ಅಭಿಯಾನದ ಅಧ್ಯಕ್ಷ ಸಿರಿಗೆರೆ ಪರಮೇಶ್ವರ ಗೌಡ ಅವರೇ ಕಾರಣರಾಗುತ್ತಾರೆ ಎಂದು ದೂರಿನಲ್ಲಿ ಎಚ್ಚರಿಸಿದ್ದಾರೆ.

## ಕಬಡ್ಡಿ ಪಂದ್ಯಾವಳಿಯಲ್ಲಿ ಬೆಟ್ಟಿಂಗ್ ಆರೋಪ

# ಜಿ.ಪರಮೇಶ್ವರ್ ವಿರುದ್ಧ ವಿಶೇಷ ನ್ಯಾಯಾಲಯದ ಆದೇಶಕ್ಕೆ ಹೈಕೋರ್ಟ್ ತಡೆ

**ಬೆಂಗಳೂರು,ಏ.23**–ತುಮಕೂರು ನಗರದಲ್ಲಿ ನಡೆದ ಕಬಡ್ಡಿ ಪಂದ್ಯಾವಳಿಯಲ್ಲಿ ಕಾನೂನುಬಾಹಿರವಾಗಿ ಬೆಟ್ಟಿಂಗ್ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲು ಸೂಚನೆ ನೀಡಿದ್ದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.




ಈ ಸಂಬಂಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ ಡಾ.ಜಿ.ಪರಮೇಶ್ವರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುನೀಲ್ ದತ್ತ ಯಾದವ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೆ, ಸರ್ಕಾರ ಮತ್ತು ದೂರುದಾರರಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆಯನ್ನು ಮುಂದೂಡಿತು.

ಇದಕ್ಕೂ ಮುನ್ನ ವಿಚಾರಣೆ ವೇಳೆ, ಅರ್ಜಿದಾರರ ಪರ ವಕೀಲರು, ತುಮಕೂರಿನಲ್ಲಿ ನಡೆದ ಕಬಡ್ಡಿ ಪಂದ್ಯಾವಳಿಯಲ್ಲಿ ಬೆಟ್ಟಿಂಗ್ ಕಟ್ಟಿರುವುದಾಗಿ ಹೇಳಿಕೆ ನೀಡಿರುವ ಸಂಬಂಧ ಪತ್ರಿಕೆಗಳಲ್ಲಿ ವರದಿಯಾಗಿದೆ. ಇದನ್ನು ಆಧರಿಸಿ ಪೊಲೀಸರಿಗೆ ದೂರು ನೀಡಲಾಗಿದೆ. ದೂರು ಸ್ವೀಕರಿಸಲು ನಿರಾಕರಿಸಿದ ಹಿನ್ನೆಲೆಯಲ್ಲಿ ಖಾಸಗಿ ದೂರು ಸಲ್ಲಿಸಲಾಗಿದೆ. ಈ ದೂರನ್ನು ಆಧರಿಸಿ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲು ಸೂಚನೆ ನೀಡಲಾಗಿದೆ. ಆದ್ದರಿಂದ ವಿಚಾರಣಾ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಬೇಕು ಎಂದು ಕೋರಿದರು.

ಈ ವೇಳೆ ದೂರುದಾರರ ಪರ ವಕೀಲರು, ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಪತ್ರಿಕೆಗಳಲ್ಲಿನ ವರದಿಗಳು ಮತ್ತು ವಿಡಿಯೋ ಕ್ಲಿಪ್‌ಗಳನ್ನು ಸಲ್ಲಿಸಲಾಗಿದೆ. ಎಲ್ಲ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಈ ಆದೇಶ ಮಾಡಿದೆ. ಆದ್ದರಿಂದ ಆದೇಶ ರದ್ದುಮಾಡಬಾರದು ಎಂದು ಮನವಿ ಮಾಡಿದರು.

ವಾದ ಆಲಿಸಿದ ನ್ಯಾಯಪೀಠ, ಬಿಎನ್‌ಎಸ್ 112 ಅಡಿಯಲ್ಲಿ ದೂರು ದಾಖಲಾಗಬೇಕಾದರೆ ಬೆಟ್ಟಿಂಗ್ ಮಾಡುವವರು ಯಾವುದಾದರೂ ಒಂದು ಗುಂಪಿನ ಸದಸ್ಯರಾಗಿರಬೇಕು ಎಂಬುದಾಗಿದೆ. ಆದರೆ, ಅರ್ಜಿದಾರರು ಯಾವ ಗುಂಪಿನ ಸದಸ್ಯರಾಗಿದ್ದಾರೆಯೇ? ಎಂದು ಪ್ರಶ್ನಿಸಿತು. ಅಲ್ಲದೆ, ದೂರನ್ನು ಸ್ವೀಕರಿಸುವುದಕ್ಕೆ ಪೊಲೀಸರು ಏಕೆ ನಿರಾಕರಿಸಿದ್ದರು ಎಂಬುದನ್ನು ಕೇಳಬೇಕಾಗಿತ್ತು. ಈ ಪ್ರಕ್ರಿಯೆಯನ್ನು ಮಾಡದೆ ಆದೇಶಿಸಿರುವ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶದಲ್ಲಿ ನಿಯಮಗಳನ್ನು ಮೀರಿರುವುದು ಕಂಡುಬಂದಿದೆ ಎಂದು ತಿಳಿಸಿ, ಎಫ್‌ಐಆರ್‌ಗೆ ತಡೆ ನೀಡಿ ವಿಚಾರಣೆಯನ್ನು ಮುಂದೂಡಿತು.

ಪ್ರಕರಣದ ಹಿನ್ನೆಲೆ: 2025ರ ಅಕ್ಟೋಬರ್ 19ರಂದು ತುಮಕೂರಿನಲ್ಲಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಕಬಡ್ಡಿ ಪಂದ್ಯಾವಳಿ ಆಯೋಜಿಸಲಾಗಿತ್ತು. ಈ ವೇಳೆ ದಕ್ಷಿಣ ಕನ್ನಡ ಮತ್ತು ವಿಜಯಪುರ ತಂಡಗಳು ಮುಖಾಮುಖಿಯಾಗಿದ್ದವು. ಪಂದ್ಯದಲ್ಲಿ ದಕ್ಷಿಣ ಕನ್ನಡ ಗೆಲುವು ಸಾಧಿಸಲಿದೆ ಎಂಬುದಾಗಿ ಜಿಲ್ಲಾಧಿಕಾರಿ ನಾಗಭೂಷಣ್ ಅವರೊಂದಿಗೆ ಗೃಹ ಸಚಿವ ಡಾ. ಜಿ.ಪರಮೇಶ್ವರ್ 500 ರೂ. ಬೆಟ್ಟಿಂಗ್ ಕಟ್ಟಿದ್ದರು. ಪಂದ್ಯ ಮುಗಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದ ಡಾ.ಪರಮೇಶ್ವರ್ ಅವರು, ದಕ್ಷಿಣ ಕನ್ನಡ ಗೆಲ್ಲುವುದಾಗಿ ಜಿಲ್ಲಾಧಿಕಾರಿಗಳೊಂದಿಗೆ ಬೆಟ್ಟಿಂಗ್ ಕಟ್ಟಿ 500 ರೂ. ಕಳೆದುಕೊಂಡುಬಿಟ್ಟೆ ಎಂದು ಹೇಳಿದ್ದರು.

ಈ ಸಂಬಂಧ ಖಾಸಗಿ ದೂರು ದಾಖಲಿಸಿದ್ದ ಹೆಚ್.ಆರ್.ನಾಗಭೂಷಣ್, ಗೃಹ ಸಚಿವರ ಹೇಳಿಕೆ ಅಕ್ರಮ ಬೆಟ್ಟಿಂಗ್‌ನಲ್ಲಿ ಭಾಗಿಯಾಗಲು ಸಾರ್ವಜನಿಕರನ್ನು ಪ್ರೇರೇಪಿಸಿದಂತಿದೆ. ಇದು ಬಿಎನ್‌ಎಸ್ ಸೆಕ್ಷನ್ 112(2) ಮತ್ತು 45ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದೆ. ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳ ಅನ್ವಯ ಕ್ರಮ ಕೈಗೊಳ್ಳಲು ಕೋರಿ ಪೊಲೀಸರಿಗೆ ದೂರು ನೀಡಿದ್ದರು. ದೂರನ್ನು ಪರಿಶೀಲಿಸಿದ್ದ ಕೊಡಿಗೇಹಳ್ಳಿ ಠಾಣೆಯ ಸಬ್‌ಇನ್ಸ್‌ಪೆಕ್ಟರ್, ಆರೋಪ ಆಧಾರ ರಹಿತವಾಗಿದೆ ಎಂದು ತಿಳಿಸಿ ಪ್ರಕರಣವನ್ನು ಮುಕ್ತಾಯಗೊಳಿಸಿದ್ದಾರೆ. ಆದ್ದರಿಂದ ಅವರ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ಕೋರಿದ್ದರು.

ಈ ಸಂಬಂಧ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯ, ಗೃಹ ಸಚಿವರು ಹಾಗೂ ತುಮಕೂರು ಜಿಲ್ಲಾಧಿಕಾರಿ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಪರಮೇಶ್ವರ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಅಲ್ಲದೆ, ವಿಶೇಷ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿರುವ, ಡಾ.ಪರಮೇಶ್ವರ್, ತಾನು ಯಾವುದೇ ಬೆಟ್ಟಿಂಗ್ ಗುಂಪುಗಳಲ್ಲಿಲ್ಲ. ತಮ್ಮ ವಿರುದ್ಧ ಸಂಘಟಿತ ಬೆಟ್ಟಿಂಗ್ ಚಟುವಟಿಕೆ ನಡೆಸಿರುವ ಆರೋಪವಿಲ್ಲ. ಅಲ್ಲದೆ, ಬೆಟ್ಟಿಂಗ್‌ಗೆ ಪ್ರಚೋದನೆ ನೀಡಿರುವುದು, ಪಿತೂರಿ ಅಥವಾ ಉದ್ದೇಶಪೂರ್ವಕ ಸಹಾಯ ಮಾಡಿರುವ ಸಂಬಂಧ ಯಾವುದೇ ಪುರಾವೆಗಳಿಲ್ಲ. ಸಾರ್ವಜನಿಕ ಸಮಾರಂಭದಲ್ಲಿ ಮಾಡಿದ ತಪ್ಪಾದ ಹೇಳಿಕೆಯನ್ನು ಆಧರಿಸಿ ಖಾಸಗಿ ದೂರು ದಾಖಲಿಸಲಾಗಿದೆ. ಇದು ಕಾನೂನು ಪ್ರಕ್ರಿಯೆಯ ದುರುದ್ದೇಶಪೂರಿತ ದುರುಪಯೋಗವಾಗಿದೆ ಎಂದಿದ್ದಾರೆ.

ಅಲ್ಲದೆ, ಅಪರಾಧ ಆರೋಪ ಸಂಬಂಧ ಮೂಲಭೂತ ಕಾನೂನು ಅಂಶಗಳನ್ನು ಸರಿಯಾಗಿ ಪರಿಗಣಿಸದೆ ಈ ಆದೇಶ ನೀಡಲಾಗಿದೆ. ಅಲ್ಲದೆ, ಅರ್ಜಿದಾರರ ವಿರುದ್ಧ ಯಾವುದೇ ನೇರ ಅಥವಾ ಪರೋಕ್ಷ ಪಾತ್ರ, ಕೃತ್ಯ ಅಥವಾ ವಸ್ತು ಸಾಕ್ಷ್ಯಾಧಾರಗಳಿಲ್ಲ. ಅವರ ವಿರುದ್ಧದ ಆರೋಪ ಕಾನೂನು ಪ್ರಕ್ರಿಯೆಯ ಸ್ಪಷ್ಟ ದುರುಪಯೋಗವಾಗಿದೆ. ಭಾರತದ ಸಂವಿಧಾನದ 21ನೇ ವಿಧಿ ಅಡಿಯ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಲಿದೆ. ಆದ್ದರಿಂದ ವಿಶೇಷ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಬೇಕು ಎಂದು ಕೋರಿದ್ದಾರೆ.

# ಸಿಇಟಿ ಪರೀಕ್ಷೆ : ವಿದ್ಯಾರ್ಥಿನಿಯರ ಮೂಗುತಿ ತೆಗೆಯಲಾಗದೆ ಮೂಗಿಗೆ ಟೇಪ್ ಅಂಟಿಸಿದ ಸಿಬ್ಬಂದಿ

**ಚಿಕ್ಕಮಗಳೂರು/ಬಳ್ಳಾರಿ,ಏ.23**–ರಾಜ್ಯಾದ್ಯಂತ ಇಂದಿನಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸುವ 2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಗಳು ಆರಂಭವಾಗಿವೆ. ಪರೀಕ್ಷೆ ವೇಳೆ ಪರೀಕ್ಷಾರ್ಥಿಗಳು ಲೋಹದ ಆಭರಣಗಳನ್ನು ಧರಿಸುವುದಕ್ಕೆ ಕಟ್ಟುನಿಟ್ಟಿನ ನಿಷೇಧವಿದ್ದ ಕಾರಣ, ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಒಳಪ್ರವೇಶಕ್ಕೂ ಮುನ್ನ ನೂರಾರು ವಿದ್ಯಾರ್ಥಿನಿಯರನ್ನು ತಡೆದು ಮೂಗುತಿ, ಇತರ ಆಭರಣಗಳನ್ನು ತೆಗೆಸಿದ ಘಟನೆಗಳು ನಡೆದವು.

ತಪಾಸಣೆ ವೇಳೆ ಚಿಕ್ಕಮಗಳೂರಿನ ಎಂಇಎಸ್ ಕಾಲೇಜಿನಲ್ಲಿ ವಿದ್ಯಾರ್ಥಿನಿಯರನ್ನು ತಡೆ ಹಿಡಿಯಲಾಯಿತು. ಮೂಗುತಿ ಬಿಚ್ಚಲು ಸಾಧ್ಯವಾಗದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾದಾಗ, ಪರೀಕ್ಷಾ ಸಿಬ್ಬಂದಿಯೇ ವಿದ್ಯಾರ್ಥಿನಿಯರ ಮೂಗಿನ ಮೇಲೆ ಗಮ್ ಟೇಪ್ ಅಂಟಿಸಿ ಪರೀಕ್ಷಾ ಕೊಠಡಿಯೊಳಗೆ ಕಳುಹಿಸಿದ ಘಟನೆ ನಡೆಯಿತು.

ನಿಯಮಗಳ ಕಟ್ಟುನಿಟ್ಟಿನ ಪಾಲನೆಗಾಗಿ ಮೂಗಿಗೆ ಟೇಪ್ ಅಂಟಿಸಿರುವುದು ಪೋಷಕರು ಮತ್ತು ಅಭ್ಯರ್ಥಿಗಳ ಅಸಮಾಧಾನಕ್ಕೆ ಕಾರಣವಾಯಿತು. ಪರೀಕ್ಷೆಯ ಒತ್ತಡದ ನಡುವೆ ಈ ವಿಚಿತ್ರ ಸನ್ನಿವೇಶವು ವಿದ್ಯಾರ್ಥಿನಿಯರಲ್ಲಿ ಕೆಲಕಾಲ ಗೊಂದಲ ಸೃಷ್ಟಿಸಿತು. ಪರೀಕ್ಷೆ ಸುಗಮವಾಗಿ ನಡೆಯಬೇಕು ಎಂಬ ಉದ್ದೇಶದಿಂದ ಸಿಬ್ಬಂದಿ ಈ ಕ್ರಮಕ್ಕೆ ಮುಂದಾದರು.

ಅಂತಿಮವಾಗಿ ಯಾವುದೇ ಅಹಿತಕರ ಘಟನೆ ನಡೆಯದೆ, ಪರೀಕ್ಷೆಯು ಸುಗಮವಾಗಿ ಮುಂದುವ ರೆಯಿತು.

ಪರೀಕ್ಷಾ ಕೇಂದ್ರದ ಸುತ್ತಮುತ್ತ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

ಬಳ್ಳಾರಿಯಲ್ಲಿ ಕಿವಿಯೋಲೆ ಬಿಚ್ಚಿಸಿದ ಸಿಬ್ಬಂದಿ: ಬಳ್ಳಾರಿ ಜಿಲ್ಲೆಯಾದ್ಯಂತ 10 ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆಗಳು ನಡೆಯುತ್ತಿವೆ. ಒಟ್ಟು 6,667 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ. ಪರೀಕ್ಷಾ ಕೇಂದ್ರಗಳಿಗೆ ಒಳಪ್ರವೇಶಿಸುವ ಮುನ್ನ ವಿದ್ಯಾರ್ಥಿಗಳನ್ನು ಕಟ್ಟುನಿಟ್ಟಿನ ಪರಿಶೀಲನೆ ನಡೆಸಲಾಯಿತು.

ಈ ವೇಳೆ, ವಿದ್ಯಾರ್ಥಿನಿಯರ ಕಿವಿಯೋಲೆ ಸೇರಿದಂತೆ ಇತರ ಆಭರಣಗಳನ್ನು ಪರೀಕ್ಷಾ ಸಿಬ್ಬಂದಿಯು ಬಿಚ್ಚಿಸಿದರು. ಅಲ್ಲದೆ, ಕೊರಳಿಗೆ ಹಾಗೂ ಕೈಯಲ್ಲಿ ಧರಿಸಿದ್ದ ದಾರಗಳನ್ನೂ ಸಹ ತೆಗೆಸಲಾಗಿದೆ. ಬಹುತೇಕ ವಿದ್ಯಾರ್ಥಿಗಳು ಯಾವುದೇ ರೀತಿಯ ಆಭರಣ ಧರಿಸದೇ ಕೇಂದ್ರಗಳಿಗೆ ಆಗಮಿಸಿದ್ದರು. ಪರೀಕ್ಷೆಗಳು ಸುಗಮವಾಗಿ ನಡೆಯಲು ಅಗತ್ಯ ಭದ್ರತೆ ಕೈಗೊಳ್ಳಲಾಗಿತ್ತು.

ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶು ವೈದ್ಯಕೀಯ ಸೇರಿದಂತೆ ವಿವಿಧ ವೃತ್ತಿಪರ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸುವ 2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಏಪ್ರಿಲ್ 23 ಮತ್ತು 24ರಂದು ನಡೆಯುತ್ತಿವೆ.

ಹೊರನಾಡು ಮತ್ತು ಗಡಿನಾಡು ಕನ್ನಡಿಗರಿಗೆ ಏಪ್ರಿಲ್ 22ರಂದು ಕನ್ನಡ ಭಾಷಾ ಪರೀಕ್ಷೆ ಬೆಂಗಳೂರು, ಮಂಗಳೂರು, ವಿಜಯಪುರ ಮತ್ತು ಬೆಳಗಾವಿ ನಗರಗಳ ಒಟ್ಟು ಐದು ಕೇಂದ್ರಗಳಲ್ಲಿ ನಡೆದವು. ಏ.23ರಂದು ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ ಹಾಗೂ ಏ.24ರಂದು ಗಣಿತ ಮತ್ತು ಜೀವ ವಿಜ್ಞಾನ ವಿಷಯಗಳ ಪರೀಕ್ಷೆಗಳು ನಡೆಯಲಿದ್ದು, ಬಿಗಿ ಬಂದೋಬಸ್ತ್ ಮಾಡಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಪರೀಕ್ಷಾ ಅಕ್ರಮಗಳನ್ನು ತಡೆಯುವ ಉದ್ದೇಶದಿಂದ ನೇಮಕಾತಿ ಪರೀಕ್ಷೆಗಳಿಗೆ ಮಾಡುವ ಹಾಗೆ ಈ ಪರೀಕ್ಷೆಗೂ ಕ್ಯಾಮೆರಾ ಕಣ್ಗಾವಲು ಇದೆ. ವೆಬ್ ಕಾಸ್ಟಿಂಗ್ ಮೂಲಕ ಎಲ್ಲ 745 ಪರೀಕ್ಷಾ ಕೇಂದ್ರಗಳ ಮೇಲೆ ನಿಗಾ ಇಡುವ ವ್ಯವಸ್ಥೆ ಮಾಡಿದ್ದು, ಕಟ್ಟೆಚ್ಚರ ವಹಿಸಲಾಗಿದೆ. ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮೇಲುಸ್ತುವಾರಿ ವಹಿಸಿದ್ದಾರೆ.

# ದಾರಿ ತೋರಿಸುವ ನೆಪದಲ್ಲಿ ತಣ್ಣೀರುಬಾವಿ ಬೀಚ್‌ನಲ್ಲಿ ಬರ್ತ್‌ಡೇ ಆಚರಿಸಲು ಬಂದವರ ಸುಲಿಗೆ: ರೌಡಿ ಶೀಟರ್ ಅರೆಸ್ಟ್

**ಮಂಗಳೂರು,ಏ.23**–ಬರ್ತ್‌ಡೇ ಆಚರಿಸಲು ತಣ್ಣೀರುಬಾವಿ ಬೀಚ್‌ಗೆ ಬಂದಿದ್ದವರಿಗೆ ದಾರಿ ತೋರಿಸುವ ನೆಪದಲ್ಲಿ ಕಾರಿನೊಳಗೆ ಕುಳಿತು ಮೌಲ್ಯಯುತ ವಸ್ತುಗಳನ್ನು ಸುಲಿಗೆ ಮಾಡಿರುವ ಪ್ರಕರಣದಲ್ಲಿ ರೌಡಿ ಶೀಟರ್‌ನ್ನು ಪಣಂಬೂರು ಪೊಲೀಸರು ಬಂಧಿಸಿದ್ದಾರೆ. ಬೆಂಗ್ರೆ ನಿವಾಸಿ ಚಂದು ಹಾರೀಸ್ (33) ಬಂಧಿತ ಆರೋಪಿ. ಮಾ.13ರಂದು ಬೆಳಗಿನ ಜಾವ 2.30ರ ಸುಮಾರಿಗೆ ಮಡಿಕೇರಿಯ ಸೋಮವಾರಪೇಟೆ ನಿವಾಸಿ ಅಜಯ್ ಕೆ. (29) ಎಂಬುವರು ತಮ್ಮ ಸ್ನೇಹಿತರಾದ ರಮೇಶ್ ಮತ್ತು ರಫೀಕ್ ಎಂಬುವರೊಂದಿಗೆ ಕಾರಿನಲ್ಲಿ ತಣ್ಣೀರುಬಾವಿ ಬೀಚ್‌ಗೆ ತನ್ನ ಹುಟ್ಟುಹಬ್ಬ ಆಚರಿಸಲೆಂದು ಬಂದಿದ್ದರು. ಆದರೆ ತಣ್ಣೀರುಬಾವಿ ಬೀಚ್ ಸಮೀಪ ಬಂದು ಸ್ವಲ್ಪ ಮುಂದಕ್ಕೆ ದಾರಿ ತಪ್ಪಿ ಕಸಬಾ ಬೆಂಗ್ರೆ ಕಡೆ ಹೋಗಿದ್ದರು. ಈ ವೇಳೆ ರಸ್ತೆ ಬದಿಯಲ್ಲಿ ಇಬ್ಬರು ಯುವಕರು ನಡೆದುಕೊಂಡು ಹೋಗುತ್ತಿದ್ದರು.

ಆಗ ದಾರಿ ತಪ್ಪಿದ ಅಜಯ್ ಕೆ. ಅವರು ಕಾರನ್ನು ನಿಲ್ಲಿಸಿ ಅವರಲ್ಲಿ ಬೀಚ್‌ಗೆ ಹೋಗುವ ದಾರಿ ಬಗ್ಗೆ ವಿಚಾರಿಸಿದ್ದರು. ಈ ವೇಳೆ ಇಬ್ಬರು ವಿಳಾಸ ತೋರಿಸುವುದಾಗಿ ಹೇಳಿ ಕಾರಿನ ಹಿಂಬದಿಯಲ್ಲಿ ಕುಳಿತು ಕಾರನ್ನು ಚಲಾಯಿಸಲು ಹೇಳಿದ್ದಾರೆ. ಅದರಂತೆ ಅಜಯ್ ಕೆ. ಯವರು ಸ್ವಲ್ಪ ಮುಂದಕ್ಕೆ ಹೋದ ಸಂದರ್ಭ ಕಾರನ್ನು ನಿಲ್ಲಿಸಿ ಇಬ್ಬರು ಆರೋಪಿಗಳು ತಮ್ಮ ಬಳಿ ಇದ್ದ ಸ್ಕ್ರೂ ಡ್ರೈವರನ್ನು ತೆಗೆದು ಮೂವರಿಗೂ ಚುಚ್ಚುವುದಾಗಿ ಬೆದರಿಸಿ, ಕಾರಿನ ಮುಂಭಾಗದ ಗ್ಲಾಸನ್ನು ಸ್ಕ್ರೂ ಡ್ರೈವರ್ ಹಿಡಿಯಿಂದ ಗುದ್ದಿ ಹಾನಿ ಮಾಡಿದ್ದಾರೆ.

ಅಲ್ಲದೆ ಅಜಯ್ ಮತ್ತು ಸ್ನೇಹಿತರ ಬಳಿ ಇದ್ದ ಸುಮಾರು 9,000 ರೂ ಮೌಲ್ಯದ ಟೈಟಾನ್ ವಾಚ್, 3,000 ರೂ. ಮೌಲ್ಯದ ಫಾಸ್ಟ್ ಟ್ರಾಕ್ ವಾಚ್ ಮತ್ತು 2,000ರೂ ಹಣ, ಕ್ಯಾಮರಾಕ್ಕೆ ಅಳವಡಿಸುವ 8,000ರೂ. ಮೌಲ್ಯದ ಗಿಂಬಲ್, 2,000ರೂ. ಮೌಲ್ಯದ ಪವರ್ ಬ್ಯಾಂಕ್ ಮತ್ತು 500ರೂ. ಮೌಲ್ಯದ ರೋಲ್ಡ್ ಗೋಲ್ಡ್ ಬ್ರಾಸ್ಲೈಟ್‌ಗಳನ್ನು ಕಿತ್ತುಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಲ್ಲದೆ ಕೃತ್ಯ ನಡೆದ ಸ್ಥಳಕ್ಕೆ ಬೈಕ್‌ನಲ್ಲಿ ಬಂದ ಮತ್ತೊಬ್ಬ ಆರೋಪಿಗಳನ್ನು ಕರೆದುಕೊಂಡು ಹೋಗಿದ್ದಾನೆ. ಕಾರಿನ ಗ್ಲಾಸಿಗೆ ಆದ ಹಾನಿಯಿಂದ ಅಂದಾಜು 8,000 ರೂ. ನಷ್ಟ ಆಗಿದೆ. ದೂರುದಾರರಿಂದ ಕಿತ್ತುಕೊಂಡ ಸೊತ್ತುಗಳ ಹಾಗೂ ಕಾರಿನ ಗ್ಲಾಸಿಗೆ ಹಾನಿ ಪಡಿಸಿದರ ಒಟ್ಟು ಅಂದಾಜು ಮೌಲ್ಯ 32,500 ರೂ. ಆಗಿದೆ. ಈ ಬಗ್ಗೆ ಪಣಂಬೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ತನಿಖೆ ಮುಂದುವರಿಸಿದ ಪಣಂಬೂರು ಪೊಲೀಸ್ ಠಾಣಾ ಪೊಲೀಸ್ ನಿರೀಕ್ಷಕ ಸಲೀಂ ಅಬ್ಬಾಸ್ ಅವರು ತಮ್ಮ ಸಿಬ್ಬಂದಿ ಸಹಕಾರದೊಂದಿಗೆ

ಕಾರ್ಯಾಚರಣೆ ನಡೆಸಿ ಆರೋಪಿಗಳಾದ ಮೊಹಮ್ಮದ್ ಸಿನಾನ್ ಮತ್ತು ಝುಹೀರ್ ನಿಸಾರ್ ಎಂಬವರನ್ನು ಖಚಿತ ಮಾಹಿತಿ ಮೇರೆಗೆ ಕಸಬಾ ಬೆಂಗ್ರೆಯಲ್ಲಿ ಅದೇ ದಿನ ವಶಕ್ಕೆ ಪಡೆದಿದ್ದಾರೆ. ಜೊತೆಗೆ ಅವರಿಂದ ಸುಲಿಗೆ ಮಾಡಿದ ಸೊತ್ತುಗಳಾದ ಕ್ಯಾಮರಾಕ್ಕೆ ಅಳವಡಿಸುವ ಗಿಂಬಲ್, ಟೈಟಾನ್ ಕಂಪನಿಯ ವಾಚ್ ಹಾಗೂ ಆರೋಪಿತರು ಕೃತ್ಯಕ್ಕೆ ಬಳಸಿದ ಸ್ಕ್ರೂ ಡ್ರೈವರನ್ನು ವಶಪಡಿಸಿಕೊಂಡಿದ್ದಾರೆ.

ಕೃತ್ಯದಲ್ಲಿ ಪಾಲ್ಗೊಂಡ ಇನ್ನೊಬ್ಬ ಆರೋಪಿ ಕಸಬಾ ಬೆಂಗ್ರೆ ನಿವಾಸಿ ಚಂದು ಹಾರೀಸ್ (33) ಎಂಬಾತ ತಲೆಮರೆಸಿಕೊಂಡಿದ್ದನು. ಸದ್ಯ ಈತನನ್ನು ಈ ದಿನ ಎ 22 ರಂದು ಬಂಧನ ಮಾಡಿ ಆತನಿಂದ ಉಳಿದ ಸುಲಿಗೆ ಮಾಡಿದ ವಸ್ತುಗಳಾದ ಸ್ಮಾರ್ಟ್ ವಾಚ್, ಪವರ್ ಬ್ಯಾಂಕ್ ಮತ್ತು ಕೃತ್ಯಕ್ಕೆ ಬಳಸಿದ ಟಿವಿಎಸ್ ಅಪಾಚಿ ಬೈಕ್ ಅನ್ನು ವಶಕ್ಕೆ ಪಡೆದಿದ್ದಾರೆ.

ಚಂದು ಹ್ಯಾರೀಸ್ ಈತನ ವಿರುದ್ಧ 30ಕ್ಕೂ ಅಧಿಕ ಪ್ರಕರಣಗಳು ದಾಖಲಾಗಿದ್ದು, ಈತನ ವಿರುದ್ಧ ಪಣಂಬೂರು ಠಾಣೆಯಲ್ಲಿ ಈಗಾಗಲೇ ರೌಡಿ ಶೀಟರ್ ತೆರೆಯಲಾಗಿದ್. ಈತನ ವಿರುದ್ಧ ನ್ಯಾಯಾಲಯದಲ್ಲಿ ಹಳೆಯ ಪ್ರಕರಣಗಳಲ್ಲಿ ಮೂರು ವಾರೆಂಟ್‌ಗಳು ಕೂಡ ಜಾರಿಯಾಗಲು ಬಾಕಿ ಇರುತ್ತದೆ ಎಂದು ಮಂಗಳೂರು ನಗರ ಪೊಲೀಸ್ ಕಮೀಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

# ...ಮೊದಲನೇ ಪುಟದಿಂದ

## ದಕ್ಷಿಣ ಕನ್ನಡ ಪ್ರಥಮ, ಕಲಬುರಗಿ ಕೊನೆ ಸ್ಥಾನ

ಬಾಲಕಿಯರದ್ದೇ ಮೇಲುಗೈ: ಈ ಬಾರಿಯೂ ಬಾಲಕಿಯರೇ ಮೇಲುಗೈ (ಶೇ.96) ಸಾಧಿಸಿದ್ದಾರೆ. ದಕ್ಷಿಣ ಕನ್ನಡ (98.40) ಮತ್ತು ಉಡುಪಿ (98.18) ಅಗ್ರ ಸ್ಥಾನ ಪಡೆದರೆ, ಕಲಬುರಗಿ (85.06) ಮತ್ತು ಮಧುಗಿರಿ (90.26) ಕೊನೆಯ ಸ್ಥಾನ ಪಡೆದಿವೆ. ಏಳು ವಿದ್ಯಾರ್ಥಿಗಳು 625ಕ್ಕೆ 625 ಅಂಕ ಪಡೆದಿದ್ದಾರೆ ಎಂದು ಸಚಿವರು ತಿಳಿಸಿದರು.

ಮೇ 18 ರಿಂದ 25ರವರೆಗೆ **SSLC** ಪರೀಕ್ಷೆ ನಡೆಯಲಿದೆ. ಈ ಬಾರಿ ಪರೀಕ್ಷೆ-3 ಇರುವುದಿಲ್ಲ, ಫೇಲಾದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ. ಫಲಿತಾಂಶ ವೃದ್ದಿಗೊಳಿಸಲು ಶುಲ್ಕ ನಿಗದಿಪಡಿಸಲಾಗಿದೆ. ತೃತೀಯ ಭಾಷೆಯಲ್ಲಿ ಫೇಲಾದ ಹಾಗೂ ಫಲಿತಾಂಶ ಸುಧಾರಿಸಲು ಶುಲ್ಕ ವಿಧಿಸಲಾಗಿಲ್ಲ ಎಂದು ಸಚಿವ ಮಧು ಬಂಗಾರಪ್ಪ ಅವರು ವಿವರಿಸಿದರು.

**ಫಲಿತಾಂಶ ಹೀಗೆ ನೋಡಿ:** ಎಸ್‌ಎಸ್‌ಎಲ್‌ಸಿ ಪರೀಕ್ಷೆ - 1 ರ ಫಲಿತಾಂಶವನ್ನು **https://karresults.nic.in** ಲಿಂಕ್ ಮೂಲಕ ಮತ್ತು ಕರ್ನಾಟಕ ಒನ್ ಮೊಬೈಲ್ ಆ್ಯಪ್ ಮೂಲಕವೂ ಪಡೆಯಬಹುದಾಗಿದೆ. ದ್ವಿತೀಯ ಪಿಯುಸಿ ಯಂತೆಯೇ 10ನೇ ತರಗತಿ ವಿದ್ಯಾರ್ಥಿಗಳಿಗೂ ಸಹ ಡಿಜಿಲಾಕರ್‌ನಲ್ಲಿ ಅಂಕಪಟ್ಟಿಗಳು ಲಭ್ಯವಾಗುವ ವ್ಯವಸ್ಥೆಯನ್ನು ಇದೇ ಮೊದಲ ಬಾರಿಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಮಾಡಿದೆ. ವಿದ್ಯಾರ್ಥಿಗಳು **https://digilocker.gov.in** ಅನ್ನು ಬಳಸಿ ಅಂಕಪಟ್ಟಿಯನ್ನು ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ. 0ನೇ ತರಗತಿ ಪರೀಕ್ಷೆ - 1ರ ಫಲಿತಾಂಶ ಮಾರ್ಚ್ 18 ರಿಂದ ನಡೆದಿದ್ದ ಪರೀಕ್ಷೆ: ಪ್ರಸಕ್ತ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾ.18 ರಿಂದ ಏ.2ರ ವರೆಗೆ ನಡೆದಿತ್ತು. 8,65,988 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು.

## ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಫಲಿತಾಂಶ ಹೆಚ್ಚಳ: ಮಕ್ಕಳು, ಶಿಕ್ಷಕರಿಗೆ ಅಭಿನಂದಿಸಿದ ಡಿಸಿ

ರಾಯಚೂರು ತಾಲೂಕಿನ ಬೀಜನಗೇರಾ ಶ್ರೀವೆಂಕಟರೆಡ್ಡಿ ಮಲ್ಲನಗೌಡ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿನಿ ವರ್ಷಿತ ತಿಕ್ಕಣ 96.46 ಅಂಕ ಪಡೆದಿದ್ದಾರೆ. ಕನ್ನಡದಲ್ಲಿ 125, ಇಂಗ್ಲೀಷ್ 100, ಹಿಂದಿಯಲ್ಲಿ 100 ಅಂಕ ಪಡೆದು ಸಾಧನೆ ಮೆರೆದಿದ್ದಾರೆ. ರಾಯಚೂರು ತಾಲೂಕಿನ ಚಂದ್ರಬಂಡ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ನಂದು ಎಂಬ ಬಾಲಕಿ ಶೇ. 96.32 ರಷ್ಟು ಅಂಕ ಪಡೆದು ಉನ್ನತ ಸ್ಥಾನದಲ್ಲಿ ತೇರ್ಗಡೆಯಾಗಿದ್ದಾಳೆ. ಕನ್ನಡ ಮತ್ತು ಹಿಂದಿಯಲ್ಲಿ ನೂರಕ್ಕೆ ನೂರು ಅಂಕ ಪಡೆದಿದ್ದಾಳೆ. ಹೆಚ್ಚು ಅಂಕ ಪಡೆದ ಎಲ್ಲ ವಿದ್ಯಾರ್ಥಿಗಳಿಗೂ ಅಭಿನಂದಿಸುವದಾಗಿ ತಿಳಿಸಿದರು.

## ನಗರದಲ್ಲಿ ನೆರಳಿನ ವ್ಯವಸ್ಥೆ ಮಾಡಲು ಆಗ್ರಹಿಸಿ ಪ್ರಗತಿಪರ ಸಂಘಟನೆಗಳ ಪ್ರತಿಭಟನೆ

ಸಿಂಗಲ್‌ಗಳಲ್ಲಿ ನಾಲ್ಕು ಕಡೆ ನೆರಳಿನ ವ್ಯವಸ್ಥೆಯ ಬದಲು ಎರಡು ಕಡೆ ಮಾತ್ರ ಮಾಡಲಾಗುತ್ತಿದೆ. ಕೂಡಲೇ ನಾಲ್ಕು ಕಡೆಗಳಲ್ಲಿಯೂ ನೆರಳಿನ ವ್ಯವಸ್ಥೆ ಮಾಡಬೇಕೆಂದರು. ಕ್ರಾಂತಿಯೋಗಿ ಬಸವೇಶ್ವರ ಸಂಘದ ಅಧ್ಯಕ್ಷ ರಾಜೇಶ ಮಾತನಾಡಿ, ಬೇಸಿಗೆ ಹೆಚ್ಚಳದಿಂದ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಕುಡಿಯುವನೀರಿನ ಅರವಟ್ಟಿಗೆ ವ್ಯವಸ್ಥೆ ಮಾಡಿಲ್ಲ. ಸಿಗ್ನಲ್‌ಗಳಲ್ಲಿ ನೆರಳಿನ ವ್ಯವಸ್ಥೆ ಮಾಡಬೇಕೆಂದು ಆಗ್ರಹಿಸಿದರು. ಅಂಬೇಡ್ಕರ ಸೇನೆ ಅಧ್ಯಕ್ಷ ವಿಶ್ವನಾಥಪಟ್ಟಿ ಮಾತನಾಡಿ ಬೇಸಿಗೆ ಹಿನ್ನಲೆಯಲ್ಲಿ ಪಾಲಿಕೆ ಕುಡಿಯುವ ನೀರು, ನೆರಳು ವ್ಯವಸ್ಥೆ ಮಾಡದೇ ಇರುವದು ಖಂಡನೀಯವಾಗಿದೆ. ಕೂಡಲೇ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕೆಂದರು. ಷಣ್ಮುಖ, ಖಾಜಾಹುಸೇನ್ , ಅಮರಗುಂಡಯ್ಯ ಸೇರಿ ಅನೇಕರಿದ್ದರು.

## ಸ್ಲಂ ಮನೆಗಳ ನಿರ್ಮಾಣ ಕಾಮಗಾರಿ ಪರಿಶೀಲನೆ-ತ್ವರಿತ ಪೂರ್ಣಕ್ಕೆ ಸೂಚನೆ

ಈ ಸಂದರ್ಭದಲ್ಲಿ ಸ್ಥಳೀಯ ನಿವಾಸಿಗಳು ತಮ್ಮ ಅಳಲನ್ನು ತೋಡಿಕೊಂಡು ಅನಗತ್ಯವಾಗಿ ಮನೆಗಳ ನಿರ್ಮಾಣ ವಿಳಂಬ ಮಾಡುತ್ತಿದ್ದಾರೆ, ನಾವು ರಸ್ತೆಯ ಮೇಲೆ ಇರುವಂತಾಗಿದೆ ಎಂದು ಹೇಳಿದರು. ಬಹುಮಹಡಿ ಕಟ್ಟಡ ನಿರ್ಮಾಣ ಮಾಡಲಾ ಗುತ್ತಿದ್ದು, ಒಟ್ಟು 108 ಫಲಾನುಭವಿ ಗಳಿಗೆ ಮನೆ ನಿರ್ಮಾಣ ಕಾಮಗಾರಿ ನಡೆಯುತ್ತಿದೆ, ಆದರೆ ಗುತ್ತಿಗೆದಾರರ ನಿರ್ಲಕ್ಷ್ಯದಿಂದ ವಿಳಂಬ ವಾಗುತ್ತಿರುವದು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ ಎಂದು ಅಧಿಕಾರಿಗೆ ಹೇಳಿದ್ದು, ವಿಳಂಬ ವಾದರೇ ನಿಮ್ಮನ್ನೇ ಹೊಣೆಗಾರರನ್ನಾಗಿ ಮಾಡಿ ಕ್ರಮ ಜರುಗಿಸಲಾಗುವದು ಎಂದು ಅಧಿಕಾರಿಗಳಿಗೆ ಎಚ್ಚರಿಸಿದರು. ಈ ಸಂದರ್ಭದಲ್ಲಿ ಯೋಜನಾ ಆಯೋಗದ ಸದಸ್ಯ ಡಾ.ರಝಾಕ ಉಸ್ತಾದ, ಕೆ.ಅಸ್ಲಂ ಪಾಶಾ, ಮೊಹಮ್ಮದ ಉಸ್ಮಾನ, ಕೆ.ಇ.ಕುಮಾರ, ರಮೇಶ ರೋಸ್ಲಿ, ಅಂಜಿನಕುಮಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## 26 ರಂದು ಹುಬ್ಬಳ್ಳಿಯಲ್ಲಿ ಅಹಿಂದ್ ಸಂಘಟನೆಯಿಂದ ರಾಜ್ಯಮಟ್ಟದ ವಿಚಾರ ಸಂಕಿರಣ- ಕೆ.ಶಾಂತಪ್ಪ

ಬಡ್ತಿ ಮೀಸಲಾತಿ ಚಳುವಳಿ ಮೂಲಕ ಬಲಿಷ್ಟಗೊಂಡಿರುವದು ಇತಿಹಾಸ. 2000 ರಲಿ ಅಹಿಂದ ಚಳುವಳಿ ರಾಜಕೀಯ ಶಕ್ತಿಯಾಗಿ ರೂಪಗೊಂಡು ಹುಬ್ಬಳ್ಳಿಯಲ್ಲಿ ನಡೆದ ಸಮಾವೇಶದ ಮೂಲಕಶಕ್ತಿಯಾಗಿ ರೂಪಗೊಂಡಿತು. ಕಳೆದ 25 ವರ್ಷಗಳಲ್ಲಿ ನಡೆದು ಬಂದ ದಾರಿಯ ಕುರಿತು ವಿಚಾರ ಸಂಕಿರಣದಲ್ಲಿ ಅನೇಕ ತಜ್ಞರು ಮಾತನಾಡಲಿದ್ದಾರೆ. ಮುಂದಿನ ಹೋರಾಟ ಕುರಿತು ಚರ್ಚೆ,ಸಮಾಲೋಚನೆ ನಡೆಯಲಿದೆ.ವಿಚಾರ ಸಂಕಿರಣದಲ್ಲಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳೆ, ಸಲಿಂ ಮಹ್ಮದ ಸೇರಿ ಅನೇಕ ಗಣ್ಯರು ಭಾಗಿಯಾಗಲಿದ್ದಾರೆ ಎಂದರು. ಈ ಸಂದರ್ಬದಲ್ಲಿ ಭೀಮಣ್ಣ ಮೇಟಿ, ಹನುಮಂತಪ್ಪ, ಶಂಕರ, ಜಯಪ್ಪ, ಮೊಹಿನುದ್ದೀನ್, ಆಂಜಿನಯ್ಯ, ಅಬ್ರಹಾಂ, ಹನುಮಂತಪ್ಪ ಜಾಲಿಬೆಂಚಿ ಸೇರಿ ಅನೇಕರಿದ್ದರು.

## ಒಳ ಮೀಸಲು ಜಾರಿಯಾಗದೇ ನೇಮಕಾತಿ ನಡೆಸಿದರೆ ಉಗ್ರ ಹೋರಾಟ-ನರಸಪ್ಪ ದಂಡೋರ

ದೆ. ಆದರೂ ಸರ್ಕಾರ ಒಳಮೀಸಲಾತಿ ಜಾರಿಯಾಗುವ ಮೊದಲೇ ಕೃಷಿ ಇಲಾಖೆಯಲ್ಲಿನ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರ ಮುಂದಾಗಿದ್ದು, ಏ.24ರಂದು ನಡೆಯುವ ವಿಶೇಷ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಜಾರಿ ಮಾಡುವ ಮತ್ತು ಜಾರಿ ಮಾಡುವವರೆಗೂ ನೇಮಕಾತಿಯನ್ನು ಮಾಡಬಾರದೆಂಬ ತೀರ್ಮಾನವನ್ನು ಸರ್ಕಾರ ಕೈಗೊಳ್ಳಬೇಕು ಒಂದು ವೇಳೆ ನಿರ್ಲಕ್ಷ್ಯ ವಹಿಸಿದರೇ ರಕ್ತಪಾತದ ಹೋರಾಟ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು. ಸರ್ಕಾರದಲ್ಲಿ ಛಲವಾದಿ ಸಮುದಾಯದ ಮಂತ್ರಿಗಳಾದ ಜಿ.ಪರಮೇಶ್ವರ, ಹೆಚ್.ಸಿ ಮಹಾದೇವಪ್ಪ, ಪ್ರಿಯಾಂಕ್ ಖರ್ಗೆ ಹಾಗೂ ಎಐಸಿಸಿ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಸೇರಿ ಸರ್ಕಾರವನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದು, ಸಮುದಾಯಕ್ಕೆ ಅನ್ಯಾಯ ಮಾಡುವ ಸಚಿವರು ರಾಜಿನಾಮೆ ಕೊಡಬೇಕು. ಮಾದಿಗ ಸಮುದಾಯದ ಸಚಿವರು, ಶಾಸಕರು ಈ ಬಗ್ಗೆ ಕೇಳಲು ಹೋದರೇ ಅವರ ಮಾತಿಗೆ ಕಿಮ್ಮತ್ತು ನೀಡಲಾಗುತ್ತಿಲ್ಲ ಎಂದು ಹೇಳಿದರು. ಈ ಸಂದರ್ಭದಲ್ಲಿ ದುಳ್ಳಯ್ಯ ಗುಂಜಳ್ಳಿ, ಸುರೇಶ ದುಗನೂರು, ಜಕ್ರಪ್ಪ ಹಂಚಿನಾಳ, ಹನುಮಂತ ಜುಲಮಗೇರಾ, ಭೀಮೇಶ ತುಂಟಾಪೂರ, ದಾವಿದ್ ಮರ್ಚಟಾಳ್, ನರಸಿಂಹಲು ಸೇರಿ ಅನೇಕರಿದ್ದರು.

## ಬಿಜೆಪಿ ಸರ್ಕಾರ ಗರ್ವಭಂಗ-ಕುಮಾರನಾಯಕ

ದಕ್ಷಿಣ ರಾಜ್ಯಗಳಿಗೆ ರಾಜಕೀಯವಾಗಿ ತಾರತಮ್ಯವಾಗುವ ಕ್ಷೇತ್ರ ಪುನರ್ ವಿಂಗಡನೆ ನೀತಿಯೇ ಅಸಮಂಜಸವಾಗಿದೆ ಎಂದರು. ಸಂಸತ್‌ನಲ್ಲಿ ಮಹಿಳಾ ಮೀಸಲಾತಿ ಸೋಲಿಗೆ ಕಾಂಗ್ರೆಸ್ ಸೇರಿ ಇತರೆ ಪ್ರತಿಪಕ್ಷಗಳು ಮೇಜು ಕುಟ್ಟಿರುವದು ಮೀಸಲಾತಿ ಅಪಮಾನ ಮಾಡಲು ಅಲ್ಲ. ಬದಲಾಗಿ ಕೇಂದ್ರ ಸರ್ಕಾರ ಅಹಂಕಾರ ಗರ್ವಭಂಗಕ್ಕೆ ಎಂದರು.

ಪ್ರಧಾನಿ ನರೇಂದ್ರ ಮೋದಿಯವರು ಅಸಂಸದೀಯ, ಆಧಾರ ರಹಿತವಾಗಿ ಕಾಂಗ್ರೆಸ್ ಪಕ್ಷವನ್ನು ತೆಗಳುತ್ತಿರುವದು ಖಂಡನೀಯವಾಗಿದೆ.ವಿಷಕಾರಿ ಮಾತುಗಳಿಂದ ಪ್ರಧಾನಿಯವರು ಮಾತನಾಡುತ್ತಿರುವದು ಸಂಸದೀಯ ವ್ಯವಸ್ಥೆಗೆ ಅಪಮಾನ ಮಾಡಿದಂತೆ. ಮಹಿಳಾ ಮೀಸಲು ಜಾರಿಗೆ ವಿರೋಧಿಸಿರುವದನ್ನು ಬ್ರೂಣಹತ್ಯೆ ಹೋಲಿಸಿರುವದು ಘನಘೋರ ಟೀಕೆಯಾಗಿದೆ. 140 ಕೋಟಿ ದೇಶದ ಜನರನ್ನು ಪ್ರತಿನಿಧಿಸುವ ಪ್ರಧಾನಿ ಹುದ್ದೆಯಲ್ಲಿದ್ದು ಮಾತನಾಡಿರುವದು ಖಂಡನೀಯ ಎಂದರು. ದೇಶ ವಿಭಜನೆ ಮಾಡುವದಾಗಿ ಕಾಂಗ್ರೆಸ್ ಪಕ್ಷದ ಮೇಲೆ ಗೂಬೆ ಕೂರಿಸಿರುವ ಪ್ರಧಾನಿಗಳು ಉರಿಯುವ ಬೆಂಕಿಗೆ ತುಪ್ಪಸುರಿಯುವ ಕೆಲಸಮಾಡಿದ್ದಾರೆ.ದೇಶ ಅಸ್ಮಿತೆಗೆ ಪ್ರಧಾನಿಗಳಿಂದ ಕಾಂಗ್ರೆಸ್ ಪಕ್ಷ ಕಲಿಯಬೇಕಿಲ್ಲ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟದಿಂದ ಪ್ರಾರಂಭವಾಗಿರುವ ಕಾಂಗ್ರೆಸ್ ಪಕ್ಷದ ಹೋರಾಟ ಐಕ್ಯತೆ, ಸಾರ್ವಭೌಮತೆಯನ್ನನು ರಕ್ಷಿಸುತ್ತಾಬಂದಿದೆ. ದೇಶದಲ್ಲಿ ಕಾಂಗ್ರೆಸ್ ಪಕ್ಷದಿಂದಲೇ ಬದಲಾವಣೆ ಪ್ರಾರಂಭವಾಗಿದೆ. ಬದಲಾವಣೆಯನ್ನು ಕಾಂಗ್ರೆಸ್ ಪಕ್ಷ ಸುಧೀರ್ಘವಾಗಿ ಕೈಗೊಂಡಿರುವ ಬದಲಾವಣೆಯಿಂದಲೇ ಅಭಿವೃದ್ದಿ ಪಥಕ್ಕೆ ಹಾದಿಯಲ್ಲಿ ದೇಶ ಮುನ್ನಡೆದಿದೆ ಎಂದರು. ಸಂಸದೀಯ ವ್ಯವಸ್ಥೆಯ ಮೇಲೆ ಅಪನಂಬಿಕೆ ಹುಟ್ಟಿಸುವ ಕೆಲಸ ಬಿಜೆಪಿ ಮಾಡುತ್ತಿದೆ. ಕಾಂಗ್ರೆಸ್ ಪಕ್ಷವನ್ನು ಮಹಿಳಾ ಮೀಸಲು ವಿರೋಧಿ ಎಂದು ಬಿಂಬಿಸುತ್ತಿದೆ. ಸುಳ್ಳು ಹೇಳುವದರಲ್ಲಿ ನಿಸ್ಸಿಮವಾಗಿರುವ ಬಿಜೆಪಿ ನಾಯಕರು ಮಹಿಳಾ ಮೀಸಲಾತಿಜಾರಿವಿಷಯದಲ್ಲಿ ತಪ್ಪು ಮಾಹಿತಿ ಹಂಚಲಾಗುತ್ತಿದೆ. ಅಸ್ಪಷ್ಟ, ಅಪೂರ್ಣ ಮಾಹಿತಿಯೊಂದಿಗೆ ತರಾತುರಿಯಲ್ಲಿ ರಾಜಕೀಯ ದುರುದ್ದೇಶದಿಂದ ಮಾಡಿರುವ ಮಸೂದೆ ಜಾರಿಗೆ ಸಾಧ್ಯವಾಗುವದಿಲ್ಲ ಎಂದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುಣ ಖರ್ಗೆಯವರಹೇಳಿರುವ ಹೇಳಿಕೆ ತಪ್ಪಾಗಿ ಅರ್ಥೈಸಲಾಗುತ್ತಿದೆ ಎಂದಷ್ಟೇ ಹೇಳಿದರು. ಈ ಸಂದರ್ಬದಲ್ಲಿ ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಪಾಟೀಲ್ ಇಟಗಿ, ಕೆ.ಶಾಂತಪ್ಪ, ಪಾಮಯ್ಯ ಮುರಾರಿ, ಜಿ,ಶಿವಮೂರ್ತಿ, ರುದ್ರಪ್ಪ ಅಂಗಡಿ, ಎನ್.ಶ್ರೀನಿವಾಸರೆಡ್ಡಿ, ಅಸ್ಲಂ ಪಾಷಾ, ನರಸಮ್ಮ ನರಸಿಂಹಲು ಮಾಡಗಿರಿ, ಅಮರೇಗೌಡ ಹಂಚಿನಾಳ, ಡಾ.ರಜಾಕ್ ಉಸ್ತಾದ ಸೇರಿದಂತೆ ಅನೇಕರಿದ್ದರು.

## ಮೋರ್ಚಾದಿಂದ ಕಾಂಗ್ರೆಸ್ ಕಚೇರಿ ಮುತ್ತಿಗೆ ಯತ್ನ-ಪ್ರತಿಕೃತಿ ದಹನ

ಏಳ್ಗೆಯನ್ನು ಸಹಿಸದೇ ಹತಾಶಗೊಂಡಿರುವ ಕಾಂಗ್ರೆಸ್ ಪಕ್ಷ ಅಧ್ಯಕ್ಷರು ವೈಯಕ್ತಿಕ ನಿಂದನೆಯಲ್ಲಿ ತೊಡಗಿರುವದು ಖಂಡನೀಯವಾಗಿದೆ. ಭಯೋತ್ಪಾದಕ ಚುಟವಟಿಕೆಗಳಿಗೆ ಪರೋಕ್ಷ ಬೆಂಬಲ ನೀಡುತ್ತಾ ಬಂದಿರುವ ಕಾಂಗ್ರೆಸ್ ಪಕ್ಷ ತುಷ್ಟೀಕರಣದಲ್ಲಿ ತೊಡಗಿ ಪ್ರಧಾನಿಯನ್ನು ಭಯೋತ್ಪಾದಕ ಎಂದು ಕರೆಯುವ ಮೂಲಕ ಮನಸ್ಥಿತಿಯನ್ನು ಬಹಿರಂಗಪಡಿಸಿಕೊಂಡಿದೆ ಎಂದು ಟೀಕಿಸಿದರು. ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಶಾಸಕ ಡಾ.ಶಿವರಾಜ ಪಾಟೀಲ್ ಎಐಸಿಸಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆಯವರು ಹತಾಶಗೊಂಡಿದ್ದಾರೆ. ಜಗತ್ತೇ ಮೆಚ್ಚಿರುವ ಪ್ರಧಾನಿ ನರೇಂದ್ರ ಮೋದಿಯವರನ್ನು ಭಯೋತ್ಪಾದಕ ಎಂದು ಕರೆಯುವ ಮೂಲಕ ಕಾಂಗ್ರೆಸ್ ಮನಸ್ಥಿತಿ ಏನು ಎಂಬುದು ಬಹಿರಂಗಗೊಂಡಿದೆ. ದೇಶ ದ್ರೋಹದ ಕೆಲಸಗಳನ್ನು ಬೆಂಬಲಸುತ್ತಿರುವ ಬಂದಿರುವ ಕಾಂಗ್ರೆಸ್ ಪಕ್ಷ ಪ್ರಧಾನಿಯರ ಮೇಲೆ ಗಂಬೀರ ಆರೋಪ ಮಾಡಿದ್ದು ಕೂಡಲೇಕ್ಷಮೆ ಯಾಚಿಸಬೇಕೆಂದರು. ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ರವೀಂದ್ರ ಜಲ್ದಾರ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ವಿನಾಯಕರಾವ್, ರಾಮಚಂದ್ರಕಡಗೋಳ, ಭಂಗಿ ನರಸರೆಡ್ಡಿ, ಜಿ.ಶಂಕರರೆಡ್ಡಿ, ವಿಜಯಕುಮಾರ ಸಜ್ಜನ, ಶಿವುಕುಮಾರಪಾಟೀಲ್ ,ವೆಂಕಟೇಶ ಮಡಿವಾಳ ಸೇರಿದಂತೆ ಅನೇಕ ಕಾರ್ಯಕರ್ತರು, ಯುವ ಮೋರ್ಚಾ ಪದಾಧಿಕಾರಿಗಳಿದ್ದರು.

# ಹೆಚ್ಚುತ್ತಿರುವ ಹಿಂದು ವಿರೋಧಿ ಕೃತ್ಯ ಖಂಡಿಸಿ ಬಜರಂಗ ದಳ ಪ್ರತಿಭಟನೆ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.24**-ದೇಶದಲ್ಲಿ ಹೆಚ್ಚುತ್ತಿರುವ ಸಮಾಜವಿರೋಧಿ ಚಟುವಟಿಕೆಗಳು ಹಾಗೂ ಲವ್ ಜಿಹಾದ್ ವಿರುದ್ಧ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ವತಿಯಿಂದ ನಗರದ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.



ದೇಶದ ಸಾಮಾಜಿಕ ವ್ಯವಸ್ಥೆ ಮತ್ತು ಸಾಮರಸ್ಯಕ್ಕೆ ಧಕ್ಕೆಯುಂಟುಮಾಡುವ ಘಟನೆಗಳು ಹೆಚ್ಚುತ್ತಿದ್ದು, ಇತ್ತೀಚಿನ ಅನೇಕ ಪ್ರಕರಣಗಳನ್ನು ನಡೆಯುತ್ತಿದ್ದು, ಯುವತಿಯರ ಮೇಲೆ ದೈಹಿಕ ಶೋಷಣೆ, ಬ್ಲಾಕ್‌ಮೇಲ್ ಹಾಗೂ ಬಲವಂತದ ಮತಾಂತರದ ಘಟನೆಗಳು ನಡೆಯುತ್ತಿರುವನ್ನು ಖಂಡಿಸಿದರು.

ಜಿಮ್ ತರಬೇತಿ ಕೇಂದ್ರಗಳನ್ನು ಬಳಸಿಕೊಂಡು ಯುವತಿಯರನ್ನು ಗುರಿಯಾಗಿಸುವ ಪ್ರಕರಣಗಳು ನಡೆಯುತ್ತಿವೆ. ಹುಬ್ಬಳ್ಳಿ, ಕೊಪ್ಪಳ ಮತ್ತು ಬಾಗಲಕೋಟೆ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ನಡೆದ ಘಟನೆಗಳನ್ನು ನಡೆದಿದೆ. ಈ ವಿಷಯದಲ್ಲಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವವರ ವಿರುದ್ಧ ತ್ವರಿತ ಮತ್ತು ಕಠಿಣ ಕ್ರಮ ಕೈಗೊಳ್ಳಬೇಕು, ಸರ್ಕಾರಿ ಮತ್ತು ಸಾರ್ವಜನಿಕ ಭೂಮಿಗಳ ಮೇಲಿನ ಅಕ್ರಮ ಅತಿಕ್ರಮಣಗಳನ್ನು ತೆರವುಗೊಳಿಸಬೇಕು

ಬಲವಂತದ ಮತಾಂತರ ಮತ್ತು ಲವ್ ಜಿಹಾದ್ ಪ್ರಕರಣಗಳನ್ನು ತಡೆಗಟ್ಟಲು ಕಠಿ ಣ ಕಾನೂನು ಜಾರಿಗೆ ತರಬೇಕು,ಇಂತಹ ಪ್ರಕರಣಗಳನ್ನು ವಿಶೇಷವಾಗಿ ಪರಿಗಣಿಸಿ ರಾಷ್ಟ್ರೀ ಯ ತನಿಖಾ ಸಂಸ್ಥೆಗೆ ಒಪ್ಪಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಅಧ್ಯಕ್ಷ ಡಿ. ರವಿ ಕೃಷ್ಣ, ಡಾ. ನಾಗರಾಜ ಬಾಲ್ಕಿ, ವಿಜಯ ಕುಮಾರ ಸಜ್ಜನ್, ಬಜರಂಗ ದಳದ ವಿಭಾಗ ಸಂಯೋಜಕ ರವಿಕುಮಾರ ಮಾನವಿ, ಉಪಾಧ್ಯಕ್ಷ ಎ. ಶ್ರೀನಿವಾಸ ಯಾದವ, ಸಹ ಸಂಯೋಜಕ ಶರಣ ಬಸವ, ಕಾರ್ಯದರ್ಶಿ ರಾಕೇಶ್ ಪಟೇಲ್ ಮಸ್ಕಿ ಹಾಗೂ ನಗರ ಸಂಯೋಜಕ ಸಾಯಿ ನಾರಾಯಣ ರೆಡ್ಡಿ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

# ಹೆಲ್ಮೆಟ್ ಧರಿಸಿ ಜೀವ ಕಾಪಾಡಿಕೊಳ್ಳಿ-ಎಸ್‌ಪಿ, ಅರುಣಾಂಗ್ಷು ಗಿರಿ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು.ಏ.23**- ದೇಹದ ಯಾವುದೇ ಭಾಗಕ್ಕೂ ಪೆಟ್ಟಾದರೂ ಚಿಕಿತ್ಸೆ ಪಡೆಯಬಹುದು, ಆದರೆ ಮನುಷ್ಯನ ತಲೆಗೆ ಪೆಟ್ಟಾದರೆ ಜೀವ ಹೋಗುವ ಸಂಭವವಿರುತ್ತದೆ. ಎಲ್ಲರೂ ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ಜೀವ ಉಳಿಸಿಕೊಳ್ಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷು ಗಿರಿ ಹೇಳಿದರು.




ತಾಲೂಕಿನ ವಡ್ಲೂರು ವೃತ್ತದಲ್ಲಿ ಜಿಲ್ಲಾ ಪೊಲೀಸ್ ಮತ್ತು ರಾಯ್ ಕೆಮ್ ಮೆಡಿಕೇರ್ ಲಿಮಿಟೆಡ್ ಕಂಪನಿ ಸಂಯುಕ್ತ ಆಶ್ರಯದಲ್ಲಿ ಉಚಿತ ಹೆಲ್ಮೆಟ್ ವಿತರಣೆ ಹಾಗೂ ಕಾನೂನು ಅರಿವು ಕಾರ್ಯಕ್ರಮದಲ್ಲಿ ಹೆಲ್ಮೆಟ್ ವಿತರಿಸಿ ಮಾತನಾಡಿದರು,

ಬೈಕ್ ಸವಾರರಿಗೆ ಪೊಲೀಸರು ಎಷ್ಟೇ ಬೈಕ್ ಸವಾರರಿಗೂ ದಂಡ ಹಾಕಿದರು ಹೆಲ್ಮೆಟ್ ಧರಿಸುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಿಲ್ಲ ಅದು ಕಾನೂನು ಬಾಹಿರ, ಇಡೀ ಕುಟುಂಬವೇ ನಿಮ್ಮ ಮೇಲೆ ನಿಂತಿರುತ್ತದೆ ಏನಾದರೂ ಬೈಕ್ ಮೇಲಿಂದ ಕೆಳಗೆ ಬಿದ್ದು ತಲೆಗೆ ಪೆಟ್ಟಾಗಿ ಸಾವನ್ನಪ್ಪಿದರೆ ಇಡೀ ನಿಮ್ಮನ್ನು ಅವಲಂಬಿಸಿದ ಕುಟುಂಬವು ಬೀದಿಗೆ ಬೀಳುತ್ತದೆ ಹಾಗೂ ನಿಮ್ಮ ಅಮೂಲ್ಯವಾದ ಜೀವ ಕಳೆದುಕೊಳ್ಳುತ್ತೀರಿ ಆದ್ದರಿಂದ ದಯವಿಟ್ಟು ಎಲ್ಲರೂ ಹೆಲ್ಮೆಟ್ ಧರಿಸಬೇಕು ಎಂದರು.

ರಾಯ್ ಕೆಮ್ ಮೆಡಿಕೇರ್ ಕಂಪನಿಯ ಮುಖ್ಯ ಅಧಿಕಾರಿಯಾದ ಪ್ರಹ್ಲಾದ್ ರಾವ್ ಕುಲಕರ್ಣಿ ಮಾತನಾಡಿ ಪ್ರತಿಯೊಬ್ಬ ಬೈಕ್ ಸವಾರರು ಹೆಲ್ಮೆಟ್ ಧರಿಸಬೇಕು ಕೋಟಿ ಕೊಟ್ಟರು ಜೀವ ಬರುವುದಿಲ್ಲ ಹೆಲ್ಮೆಟ್ ಧರಿಸದೆ ಸಾಕಷ್ಟು ಸಂಖ್ಯೆಯಲ್ಲಿ ಜಿಲ್ಲೆಯಲ್ಲಿ ಬೈಕ್ ಸವಾರರು ಸಾವನ್ನಪ್ಪಿದ್ದಾರೆ ಯುವಕರು ಹೆಚ್ಚಾಗಿ ಅಪಘಾತಕ್ಕೆ ಈಡಾಗುತ್ತಿದ್ದಾರೆ, ಎಲ್ಲರೂ ಹೆಲ್ಮೆಟ್ ಧರಿಸಬೇಕು, ಎಂದು ಹೇಳಿದರು.

ಎಲ್ಲರಿಗೂ ಹೆಲ್ಮೆಟ ವಿತರಣೆ ಮಾಡಿ ಹೆಲ್ಮೆಟ ಜಾಗೃತಿ ಕಾರ್ಯಕ್ರಮ ಅಡಿಯಲ್ಲಿ ಎಸ್ ಬಿ ಐ ಬ್ಯಾಂಕ್ ನಿಂದ ರಾಯ್ ಕೆಮ್ ಮೆಡಿಕೇರಿ ಕಂಪನಿ ವತಿಯಿಂದ ಹೆಲ್ಮೆಟ್ ಜಾಗೃತಿ ಬೈಕ್ ರ್ಯಾಲಿ ನಡೆಸಲಾಯಿತು.

ಈ ಸಂದರ್ಭದಲ್ಲಿ ಡಿವೈಎಸ್‌ಪಿ ವೆಂಕಟೇಶ, ಗ್ರಾಮೀಣ ಸಿಪಿಐ ಸಾಬಯ್ಯ, ಪಿಎ??? ಪ್ರಕಾಶ, ಕಲ್ಯಾಣ ಕರ್ನಾಟಕ ರೈತ ಸಂಘದ ಜಿಂದಪ್ಪ, ಮುಖಂಡರಾದ ಶರಣಪ್ಪ ನಾಮಾಲಿ, ಶಿವಶರಣ ಗೌಡ, ಸೂಗೂರೆಡ್ಡಿ ಗೌಡ, ಶಿವರಾಜ್, ವಡ್ಲೂರು, ಹೆಗ್ಗಸನಹಳ್ಳಿ, ಚಿಕ್ಕಸೂಗೂರು ಗ್ರಾಮದ ಮುಖಂಡರು ಹಾಗೂ ರಾಯ್ ಕೆಮ್ ಮೆಡಿಕೇರ್ ಲಿಮಿಟೆಡ್ ಕಂಪನಿಯ ಪದಾಧಿಕಾರಿಗಳಾದ ರಂಗನಾಥ್, ನಾಗಭೂಷಣ್, ಕಿಶೋರ್ ರೆಡ್ಡಿ, ವೆಂಕಟರಾವ್, ವಿ ಎಚ್ ಪ್ರಸಾದ್, ರೇಣುಕಾ, ಸಾಕಷ್ಟು ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗಿಯಾಗಿದ್ದರು.

# ವಸತಿ ನಿಲಯ ಅನುದಾನದಲ್ಲಿ ಅವ್ಯವಹಾರ ಉನ್ನತ ಮಟ್ಟದ ತನಿಖೆಗೆ ಆಗ್ರಹ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು, ಏ.23**-ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ವಸತಿ ನಿಲಯಗಳ ನಿರ್ವಹಣಾ ಅನುದಾನ ಬಳಕೆಯಲ್ಲಿ ಭಾರಿ ಅವ್ಯವಹಾರ ನಡೆದಿದ್ದು ಸೂಕ್ತ ತನಿಖೆ ನಡೆಸಿ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಕರ್ನಾಟಕ ರಾಜ್ಯ ಶೋಷಿತ ಸಮುದಾಯಗಳ ಒಕ್ಕೂಟದ ವತಿಯಿಂದ ಅಪರ ಜಿಲ್ಲಾಧಿಕಾರಿ ಗೆ ಮನವಿ ಸಲ್ಲಿಸಲಾಯಿತು.

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳಾದ ಸುನೀತಾ ಎಂ. ಘಟಕಾಂಬಳೆ ಹಾಗೂ ಪತ್ರಾಂಕಿತ ವ್ಯವಸ್ಥಾಪಕರಾದ ತಿಪ್ಪಾರೆಡ್ಡಿ ಅವರ ಅಕ್ರಮ ಎಸಗಿದ್ದಾರೆ. ಎಲ್ಲಾ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳಿಗೆ ಷೋಕಾಸ್ ನೋಟಿಸ್ ನೀಡುವ ಮತ್ತು ಸೇವೆಯಿಂದ ಅಮಾನತು ಮಾಡುವ ಬೆದರಿಕೆ ಒಡ್ಡಿದ್ದಾರೆ ಎಂದು ಆರೋಪಿಸಿದರು.

2025-26ನೇ ಆರ್ಥಿಕ ವರ್ಷದಲ್ಲಿ, ಮಾರ್ಚ್ 2026ರ ಕೊನೆಯ ಎರಡು ದಿನಗಳಲ್ಲಿ ವಸತಿ ನಿಲಯಗಳ ಆಹಾರ ಹಾಗೂ ಇತರೆ ವೆಚ್ಚಗಳ ಹೆಸರಿನಲ್ಲಿ ಸುಮಾರು 6 ಕೋಟಿ ರೂ. ಅವ್ಯವಹಾರ ನಡೆದಿದೆ. ಪ್ರಕರಣ ತನಿಖೆಗೆ ವಹಿಸಲು ಮನವಿ ಮಾಡಿದರು.

ಆರೋಪಗಳ ಕುರಿತು ಉನ್ನತ ಮಟ್ಟದ ಇಲಾಖಾ ಅಥವಾ ಲೋಕಾಯುಕ್ತ ತನಿಖೆಗೆ ತಕ್ಷಣ ಆದೇಶಿಸಬೇಕು. 2025-26ನೇ ಸಾಲಿನ ವಸತಿ ನಿಲಯಗಳ ಆಹಾರ ಸಾಮಗ್ರಿ, ಖರೀದಿ ಮತ್ತು ನಿರ್ವಹಣಾ ಬಿಲ್ಲುಗಳನ್ನು, ವಿಶೇಷವಾಗಿ ಮಾರ್ಚ್ 2026ರ ವಹಿವಾಟುಗಳನ್ನು ಕೂಲಂಕುಶವಾಗಿ ಪರಿಶೀಲಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಅಧಿಕಾರಿಗಳಾದ ಸುನೀತಾ ಎಂ. ಘಟಕಾಂಬಳೆ ಮತ್ತು ತಿಪ್ಪಾರೆಡ್ಡಿ ಅವರನ್ನು ತಕ್ಷಣವೇ ಜಿಲ್ಲೆಯಿಂದ ವರ್ಗಾಯಿಸಬೇಕು, ತನಿಖೆ ಪೂರ್ಣಗೊಳ್ಳುವವರೆಗೆ ಸಂಬಂಧಿತ ಕಡತಗಳು, ಬಿಲ್ಲುಗಳು, ವೌಚರ್‌ಗಳು, ಸ್ಟಾಕ್ ರಿಜಿಸ್ಟರ್‌ಗಳು, ಜಿಯೋಟ್ಯಾಗ್ ಫೋಟೋಗಳು (ಜಿಪಿಎಸ್) ಮತ್ತು ಇ-ಆಫೀಸ್ ದಾಖಲೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಅಧ್ಯಕ್ಷ ಮಹೇಶ, ಕೃಷ್ಣ, ಬಾಬು ಇದ್ದರು.

# ಅಕ್ಷರ ಅವಿಷ್ಕಾರ ಯೋಜನೆಯಡಿ ಅತಿಥಿ ಶಿಕ್ಷಕರ ಬಾಕಿ ವೇತನಕ್ಕೆ ಆಗ್ರಹಿಸಿ 28 ರಂದು ಪ್ರತಿಭಟನೆ- ಚನ್ನಬಸವ ಜಾನೇಕಲ್

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.24**-ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಕ್ಷರ ಆವಿಷ್ಕಾರ ಯೋಜನೆಯಡಿ ಸರ್ಕಾರಿ ಶಾಲೆಗಳಲ್ಲಿ ಪ್ರಾರಂಭವಾದ ಎಲ್‌ಕೆಜಿ ಹಾಗೂ ಯುಕೆಜಿ ತರಗತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರು ಹಾಗೂ ಆಯಾಗಳಿಗೆ 10 ತಿಂಗಳ ವೇತನ ಬಾಕಿ ಇದ್ದು, ಕೂಡಲೇ ಬಾಕಿ ವೇತನ ಪಾವತಿ ಮಾಡುವಂತೆ ಆಗ್ರಹಿಸಿ ಏ.28ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಎಐಡಿವೈಓ ಸಂಘಟನೆ ಜಿಲ್ಲಾಧ್ಯಕ್ಷ ಚನ್ನಬಸವ ಜಾನೇಕಲ್ ಹೇಳಿದರು.



ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಸರ್ಕಾರಿ ಶಾಲೆಗಳ ಎಲ್‌ಕೆಜಿ, ಯುಕೆಜಿ ಹಾಗೂ ದ್ವಿಭಾಷಾ ತರಗತಿಗಳಲ್ಲಿ ಕೆಲಸ ಮಾಡುತ್ತಿರುವ ಅತಿಥಿ ಶಿಕ್ಷಕರು ಕಳೆದ ಹತ್ತು ತಿಂಗಳಿನಿಂದ ವೇತನ ಇಲ್ಲದೇ ಪರದಾಡುತ್ತಿದ್ದು, ಈ ಬಗ್ಗೆ ಹಲವು ಬಾರಿ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು, ಜಿಲ್ಲಾಧಿಕಾರಿಗಳು ಹಾಗೂ ಕೆಕೆಆರ್‌ಡಿಬಿ ಮಂಡಳಿ ಅಧ್ಯಕ್ಷರಿಗೂ ಮನವಿ ಮಾಡಲಾಗಿದ್ದು, ಈವರೆಗೂ ವೇತನ ಬಿಡುಗಡೆ ಮಾಡಿಲ್ಲ. ಗ್ರಾಮಾಂತರ ಭಾಗಗಳಿಂದ ಶಿಕ್ಷಕರು ಪಾಠ ಮಾಡಲು ಬೇರೆ ಬೇರೆ ಶಾಲೆಗಳಿಗೆ ತೆರಳುತ್ತಾರೆ. ಇದರಿಂದ ಕೆಲಸ ಮಾಡಿದರೂ ಗೌರವಧನಕ್ಕಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಅತಿಥಿ ಶಿಕ್ಷಕರಿಗೆ ಕೆಕೆಆರ್‌ಡಿಬಿಯಿಂದ ಹಂಚಿಕೆಯಾದ ಶಾಸಕರ ಅನುದಾನದಲ್ಲಿ ಗೌರವಧನ ನೀಡಬೇಕು ಎಂದು ಸರ್ಕಾರ ನಿರ್ಧರಿಸಿದ್ದು, ಆದರೆ ಶಾಸಕರು ಅಭಿವೃದ್ಧಿ ಕಾರ್ಯಗಳಿಗೆ ದುಡ್ಡಿಲ್ಲ ಎಂದು ಹೇಳುತ್ತಿದ್ದು, ಮಂಡಳಿ ಮತ್ತು ಶಾಸಕರ ಈ ಗೊಂದಲಮಯ ಹೇಳಿಕೆಗಳ ನಡುವೆ ಶಿಕ್ಷಕರು ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದ್ದು, ಕೂಡಲೇ ಬಾಕಿ ವೇತನ ಬಿಡುಗಡೆ ಮಾಡಬೇಕು ಹಾಗೂ ಅತಿಥಿ ಶಿಕ್ಷಕರಿಗೆ 2 ಸಾವಿರ ಗೌರವ ಧನವನ್ನು ಹೆಚ್ಚಿಸಬೇಕೆಂದು ಏ.28ಕ್ಕೆ ನಗರದ ಟಿಪ್ಪು ಸುಲ್ತಾನ ಉದ್ಯಾನವನದಲ್ಲಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ದತ್ತು ಸ್ವಾಮಿ, ಸರೋಜಾ ಗೋನವಾರ, ಈರೇಶ, ಮಲ್ಲಿಕಾರ್ಜುನ ರಾಮುಲು ಸೇರಿ ಅನೇಕರಿದ್ದರು.

# ವಿದ್ಯುತ್ ಪ್ರತಿನಿಧಿಗಳಿಗೆ ಖಾಯಂಗೊಳಿಸಿ ಪ್ರೋತ್ಸಾಹ ಧನ ನೀಡಲು ಕೇಶವಮೂರ್ತಿ ಆಗ್ರಹ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.23**-ಇಂಧನ ಇಲಾಖೆಯಲ್ಲಿ ಅದರಲ್ಲೂ ವಿಶೇಷವಾಗಿ ವಿದ್ಯುತ್ ನಿಗಮದಲ್ಲಿ ಬಿಲ್ ವಿತರಕರು ಮತ್ತು ಕಂದಾಯ ವಸೂಲಿ ಮಾಡುವ ಗ್ರಾಮ ವಿದ್ಯುತ್ ಪ್ರತಿನಿಧಿಗಳನ್ನು ಖಾಯಂಗೊಳಿಸಬೇಕು ಮತ್ತು 5 ಸಾವಿರ ಪ್ರೋತ್ಸಾಹಧನ ನೀಡಬೇಕು ಎಂದು ಗ್ರಾಮ ವಿದ್ಯುತ್ ಪ್ರತಿನಿಧಿಗಳ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಎ.ಕೇಶವಮೂರ್ತಿ ಹೇಳಿದರು.



ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಕಳೆದ 23 ವರ್ಷಗಳಿಂದ ಗ್ರಾಮಗಳಲ್ಲಿ ವಿದ್ಯುತ್ ಬಿಲ್ ವಿತರಿಸುವ ಹಾಗೂ ಕಂದಾಯ ವಸೂಲಿ ಮಾಡಲು ಕಾರ್ಯ ನಿರ್ವಹಿಸುತ್ತಿದ್ದು, ಆದರೆ ಸರ್ಕಾರದಿಂದ ಖಾಯಂಗೊಳಿಸುತ್ತಿಲ್ಲ. ಬಳ್ಳಾರಿ ವಲಯದಲ್ಲಿ ಪ್ರೋತ್ಸಾಹ ಧನವನ್ನೂ ನೀಡಲಾಗುತ್ತಿಲ್ಲ ಎಂದರು.

ಬಳ್ಳಾರಿ ವಲಯದ ಲೆಕ್ಕ ನಿಯಂತ್ರಣಾಧಿಕಾರಿ ಸೂರ್ಯಕಾಂತ ಎಂಬ ಅಧಿಕಾರಿ ವಿನಾಃಕಾರಣ ಪ್ರೋತ್ಸಾಹಧನ ತಡೆಹಿಡಿದಿದ್ದು, ಇತ್ತೀಚೆಗೆ ಕುಷ್ಟಗಿಯ ವಿದ್ಯುತ್ ಪ್ರತಿನಿಧಿಯೊಬ್ಬ ಇದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಈ ಕುರಿತು ಕುಷ್ಟಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದರೂ ಅಧಿಕಾರಿಯನ್ನು ಬಂಧಿಸುತ್ತಿಲ್ಲ ಎಂದರು.

ಈ ಸಂದರ್ಭದಲ್ಲಿ ಮಹೆಬೂಬ್ ಪಾಷಾ, ಏಜಾಜ್ ಪಾಷಾ, ಆರೀಫ್, ಮಲ್ಲೇಶ, ಬಸವರಾಜ, ವೇಮಣ್ಣ, ಹನುಮಂತರಾಯ, ಪರಶುರಾಮ, ಬಂದೇನವಾಜ್, ವೀರನಗೌಡ, ನಭೀ, ರಮೇಶ ಸೇರಿ ಅನೇಕರಿದ್ದರು.

OWNER, PUBLISHER, PRINTER BY: SHYAM SUNDER L. PUBLISHED FROM: H: NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA AND PRINTED AT: KANNADA MATHRUBHOOMI PRINTERS, SHOP NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA, EDITOR BY: SHYAM SUNDER L